# ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ

**ನಂ 13/4, ಅನೆಕ್ಸ್ ಕಟ್ಟಡ, ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು 560001.**

ಮಾಹಿತಿ ಹಕ್ಕು ಅಧಿನಿಯಮ 2005 (ಸೆಂಟ್ರಲ್ ಕಾಯ್ದೆ ಸಂಖ್ಯೆ: 22/2005) ರ ಕಲಂ 4 (1) (ಬಿ) ರಲ್ಲಿ ಪ್ರದತ್ತವಾಗಿರುವಂತೆ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಮಾಹಿತಿಗಳನ್ನು ಸಾರ್ವಜನಿಕವಾಗಿ ಈ ಕೆಳಗಿನಂತೆ ಪ್ರಚಲಿತಗೊಳಿಸಲಾಗಿದೆ.

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ವ್ಯವಹಾರ ನಿರ್ವಹಣೆಯನ್ನು ಈ ಕೆಳಗೆ ನಮೂದಿಸಲಾದಂತೆ ಶಾಖಾವಾರು ಕರ್ತವ್ಯಗಳನ್ನು ವಿಂಗಡಿಸಲಾಗಿದೆ.

1. ಆಡಳಿತ ಶಾಖೆ
2. ಲೆಕ್ಕ ಪತ್ರಗಳ ಶಾಖೆ
3. ಸ್ವೀಕೃತಿ ಮತ್ತು ರವಾನೆ ಶಾಖೆ

ಇದಲ್ಲದೇ, ಮೇಲಿನ ವಿಭಾಗಗಳನ್ನು ಕೇಂದ್ರೀಕರಿಸಿ ನಿಯಂತ್ರಿಸಿ ನಿರ್ವಹಿಸಲು ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯಲ್ಲಿ ಭಾ.ಆ.ಸೇ/ಕ.ಆ.ಸೇ (ಆಯ್ಕೆ ಶ್ರೇಣಿ) ಅಥವಾ ಸರ್ಕಾರದ ಜಂಟಿ ಕಾರ್ಯದರ್ಶಿ ಹುದ್ದೆಯ ತತ್ಸಮಾನ ಅಥವಾ ಉನ್ನತ ಹುದ್ದೆಗಳಿಂದ ಪ್ರತಿನಿಯೋಜನೆ ಮೇರೆಗೆ ಕಾರ್ಯನಿರ್ವಹಿಸಲಾಗುವುದು.

# 4 (1) (ಬಿ) -I

# ರಚನೆ ಕಾರ್ಯಗಳು ಕರ್ತವ್ಯಗಳು ಮತ್ತು ವಿವರಗಳು

**ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಸಂಸ್ಥಾಪಟ (Organisation Chart) ಈ ಕೆಳಗಿನಂತಿದೆ.**




**ಆಡಳಿತ ಶಾಖೆ**: ಮಂಡಳಿಯ ಅಧಿಕಾರಿ/ಸಿಬ್ಬಂದಿಗಳ ಸೇವಾ ವಿಷಯಗಳು, ಸಾರ್ವಜನಿಕ ಅಹವಾಲುಗಳ ವಿಲೇವಾರಿ ನಿಗಮಕ್ಕೆ ಸಂಬಂಧಿಸಿದ ವಾಹನಗಳ ನಿರ್ವಹಣೆ ಕರ್ನಾಟಕ ವಿಧಾನಸಭೆ, ವಿಧಾನ ಪರಿಷತ್ ಪ್ರಶ್ನೆಗಳಿಗೆ ಉತ್ತರಿಸುವುದು ಹಾಗೂ ಪೂರಕ ಇನ್ನಿತರೆ ವಿಷಯಗಳ ನಿರ್ವಹಣೆ ಮತ್ತು ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಸ್ವೀಕೃತವಾದ ಅರ್ಜಿಗಳ ವಿಲೇವಾರಿ.

## 4 (1) (ಬಿ)- II

## ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧಿಕಾರಿ/ ಸಿಬ್ಬಂದಿ ವರ್ಗದವರ ಅಧಿಕಾರ ಮತ್ತು ಕರ್ತವ್ಯಗಳು

| | |
|---|---|
| ಗ್ರೂಪ್ -ಡಿ ನೌಕರರು | ಕಛೇರಿಯಲ್ಲಿ ಸ್ವಚ್ಛತೆ ಕಾಪಾಡುವುದು. ಕಡತಗಳನ್ನು, ಪತ್ರಗಳನ್ನು ವಿವಿಧ ಇಲಾಖೆಗಳಿಗೆ ತಲುಪಿಸುವುದು ಹಾಗೂ ಉನ್ನತ ಅಧಿಕಾರಿಗಳ ನಿರ್ದೇಶನಗಳನ್ನು ಯಥಾವತ್ತಾಗಿ ಪಾಲಿಸುವುದು. |
| ಬೆರಳಚ್ಚುಗಾರರು/ಗಣಕಯಂತ್ರ ನಿರ್ವಾಹಕರು | ಬೆರಳಚ್ಚು ನಿರ್ವಹಣೆ, ದಾಖಲೆಗಳ ಸ್ಕ್ಯಾನಿಂಗ್ ಉಸ್ತವಾರಿ |
| ಪ್ರಥಮ ದರ್ಜೆ ಸಹಾಯಕರು | ವಹಿಸಲಾದ ವಿಷಯಕ್ಕೆ ಸಂಬಂಧಿಸಿದಂತಹ ಸಮಗ್ರ ವಿಷಯ ನಿರ್ವಹಣೆಯೊಂದಿಗೆ ಕಡತ ನಿರ್ವಹಿಸುವುದು. |
| ಲೆಕ್ಕಾಧಿಕಾರಿಗಳು | ಲೆಕ್ಕ ಶಾಖೆಯ ವಿಷಯಕ್ಕೆ ಸಂಬಂಧಿಸಿದ ಸಂಪೂರ್ಣ ವಿಷಯಗಳ ಮೇಲುಸ್ತುವಾರಿ ನಿರ್ವಹಣೆ. |
| ಕಂಪನಿ ಸೆಕ್ರೆಟರಿ | ಆಡಳಿತ ವಿಭಾಗದ, ಲೆಕ್ಕಶಾಖೆಯ ಹಾಗೂ ಮಂಡಳಿಗೆ ಸಂಬಂಧಿಸಿದ ಸಮಗ್ರ ಕಛೇರಿ ಮೇಲುಸ್ತುವಾರಿಯ ನಿರ್ವಹಣೆ. |

## 4 (1) (ಬಿ) - III

## ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ.

ವಿಷಯ ನಿರ್ವಾಹಕರು ಸಲ್ಲಿಸಲಾದ ಕಡತಗಳನ್ನು ಕರ್ನಾಟಕ ಸರ್ಕಾರದ ಕಾರ್ಯವಿಂಗಡಣೆ, ನಿಯಮಗಳು ಹಾಗೂ ಕರ್ನಾಟಕ ಸರ್ಕಾರದ ವ್ಯವಹಾರ ನಿರ್ವಹಣೆ ನಿಯಮಗಳಂತೆ ಮಂಡಳಿಯ ಉನ್ನತಾಧಿಕಾರಿಗಳು ತೀರ್ಮಾನ ಕೈಗೊಳ್ಳುತ್ತಾರೆ.

## **4 (1) (ಬಿ) - IV**

## ಕಾರ್ಯನಿರ್ವಹಣೆಗೆ ರೂಪಿಸಿದ ಮಾನದಂಡಗಳು

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಕಾರ್ಯನಿರ್ವಹಣೆಯು ಈ ಕೆಳಗಿನಂತೆ ರೂಡಿ ಮತ್ತು ಕಾಲಮಿತಿಯನ್ನು ಒಳಗೊಂಡಿರುತ್ತದೆ.

1. ಗ್ರೂಪ್ -ಡಿ ನೌಕರರು: ವಹಿಸಲಾದ ಕೆಲಸವನ್ನು ಅಂದೇ ಯಥಾವತ್ತಾಗಿ ನಿರ್ವಹಿಸುವುದು.
2. ಪ್ರಥಮ ದರ್ಜೆ ಸಹಾಯಕರು: ವಹಿಸಲಾದ ಕೆಲಸವನ್ನು ಅಂದೇ ಯಥಾವತ್ತಾಗಿ ನಿರ್ವಹಿಸುವುದು.
3. ವಿಷಯ ನಿರ್ವಾಹಕರು : ಸ್ವೀಕೃತವಾದ ನಿವೇದನೆಯನ್ನು ಸಮಗ್ರವಾಗಿ ಪರಿಶೀಲಿಸಿ ಉನ್ನತ ಅಧಿಕಾರಿಗಳಿಗೆ ಸಲ್ಲಿಸುವುದು. ಸಾರ್ವಜನಿಕರ ಅಹವಾಲುಗಳು, ಸಚಿವರುಗಳ, ಸಂಬಂಧಿಸಿದ ಶಾಸಕರುಗಳ, ವಿಧಾನ ಪರಿಷತ್ ಸದಸ್ಯರುಗಳ, ಲೋಕಸಭಾ ಸದಸ್ಯರುಗಳ, ರಾಜ್ಯ ಸಭಾ ಸದಸ್ಯರುಗಳ ಹಾಗೂ ಇನ್ನಿತರೆ ಗಣ್ಯರುಗಳ ಟಿಪ್ಪಣಿಗಳನ್ನು ಪ್ರಾಥಮಿಕವಾಗಿ ಪರಿಗಣಿಸಲಾಗುವುದು. ತುರ್ತು ವಿಷಯಗಳಿದ್ದ ಪಕ್ಷದಲ್ಲಿ ಉನ್ನತಾಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಸೂಚನೆಗಳನ್ನು ಪಡೆದು ಸರ್ಕಾರದ ಆದೇಶಗಳಂತೆ ಕ್ರಮ ಜರುಗಿಸುವುದು. ಪತ್ರ ವ್ಯವಹಾರಗಳನ್ನು / ಕಡತಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಸಂಬಂಧಿಸಿದ ಇಲಾಖೆಗಳಿಗೆ ಸಲ್ಲಿಸಲಾಗುವುದು

## 4 (1) (ಬಿ) – V

**ಕಾರ್ಯನಿರ್ವಹಣೆಯ ವಿಲೇವಾರಿಯಲ್ಲಿ ಅನುಸರಿಸಬೇಕಾದ ನಿಯಮಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು**

ಸರ್ಕಾರದಲ್ಲಿ ಪಾಲಿಸಲಾಗುತ್ತಿರುವ ಕಾಯ್ದೆ ಮತ್ತು ನಿಯಮಾವಳಿಗಳ ಆಧಾರದಲ್ಲಿ ಸರ್ಕಾರದ ಆದೇಶಗಳನ್ನು ಪಾಲಿಸಲಾಗುವುದು. ಸರ್ಕಾರದ ಪೂರಕ ಕಾಯ್ದೆ ಮತ್ತು ನಿಯಮಗಳು, ಸುತ್ತೋಲೆಗಳು, ಅಧಿಸೂಚನೆಗಳು ಹಾಗೂ ಕೈಪಿಡಿಗಳಲ್ಲಿಯ ನಿರ್ದೇಶನಗಳನ್ನು ಕಟ್ಟುನಿಟ್ಟಿನಲ್ಲಿ ಪಾಲಿಸಲಾಗುವುದು.

## 4(1) (ಬಿ) – VI

ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ದಸ್ತಾವೇಜುಗಳು ವಿವರಗಳು

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧಿಕಾರಿಗಳ/ ಸಿಬ್ಬಂದಿಗಳ ಸೇವಾ ವಿಷಯಗಳ ನಿರ್ವಹಣೆಗಳು ಮತ್ತು ಮತ್ತಿತರೆ ಮಂಡಳಿಗೆ ಸಂಬಂಧಿಸಿದ ಕಡತಗಳನ್ನು ಹೊರತುಪಡಿಸಿ ಬೇರೆ ಯಾವುದೇ ಇನ್ನಿತರೆ ದಾಖಲೆಗಳನ್ನು ಮಂಡಳಿಯಲ್ಲಿ ನಿರ್ವಿಸಲಾಗುತ್ತಿಲ್ಲ.

## 4 (1) (ಬಿ) – VII

**ಸಾರ್ವಜನಿಕರಿಂದ ಸ್ವೀಕೃತವಾದ ಮನವಿಗಳನ್ನು ಉನ್ನತಾಧಿಕಾರಿಗಳ ಗಮನಕ್ಕೆ ತಂದು, ಮಂಡಳಿಯ ಕಾರ್ಯವ್ಯಾಪ್ತಿಗೆ ಒಳಪಟ್ಟ ಸ್ವೀಕೃತಿಗಳನ್ನು ಇತ್ಯರ್ಥಪಡಿಸಲಾಗುವುದು. ಇತರೆ ಸ್ವೀಕೃತಿಗಳು ಇದ್ದ ಪಕ್ಷದಲ್ಲಿ ಸಂಬಂಧಿಸಿದ ಇಲಾಖೆಗೆ ತುರ್ತು ಕ್ರಮಕ್ಕಾಗಿ ರವಾನಿಸಲಾಗುವುದು. ಅದಲ್ಲದೆ ಸಾರ್ವಜನಿಕರುಗಳು ಅವರ ಅರ್ಜಿಗೆ ಪೂರಕವಾದಂತೆ ಉನ್ನತಾಧಿಕಾರಿಗಳೊಂದಿಗೆ ಚರ್ಚಿಸಿ ಇಚ್ಛಿಸಿದ್ದಲ್ಲಿ ಅವಕಾಶ ಕೂಡ ಕಲ್ಪಿಸಲಾಗುವುದು.**

## 4 (1) (ಬಿ) – VIII

**ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ 6 ನೇ ನಿರ್ದೇಶಕ ಮಂಡಳಿ ಸಭೆಯ – ನಡವಳಿ**

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ 6 ನೇ ನಿರ್ದೇಶಕ ಮಂಡಳಿ ಸಭೆಯು ಸೋಮವಾರ ದಿನಾಂಕ 26 ಏಪ್ರಿಲ್ 2021 ರ ಮಧ್ಯಾಹ್ನ 3:00 ಗಂಟೆಗೆ, ಕೋವಿಡ್-19 ನ ಕಾರಣದಿಂದಾಗಿ Zoom ವೀಡಿಯೋ ಸಂವಾದದ ಮೂಲಕ ನಡೆಸಲಾಗಿದೆ.

| ವಿ.ಸೂ. ಸಂ | ಸಭೆಯ ನಡವಳಿ |
|---|---|
| 1 | **ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ 6ನೇ ನಿರ್ದೇಶಕ ಮಂಡಳಿ ಸಭೆಯಲ್ಲಿ ಪಾಲ್ಗೊಂಡ ನಿರ್ದೇಶಕರ ಹೆಸರು:**<br>1. ಶ್ರೀ ಸಚ್ಚಿದಾನಂದಮೂರ್ತಿ ಹಳೇಬೀಡು ಶ್ಯಾಮಣ್ಣ – ಅಧ್ಯಕ್ಷರು<br>2. ಶ್ರೀಮತಿ ಲಕ್ಷ್ಮೀ, ಕೇಂದ್ರ ಸ್ಥಾನಿಕ ಸಹಾಯಕರು, ಆಯುಕ್ತರ ಕಛೇರಿ, ಧಾ.ದ.ಇ ಹಾಗೂ ಕರ್ನಾಟಕ ಸರ್ಕಾರ ನಾಮ ನಿರ್ದೇಶಿತ ಅಧಿಕಾರಿ ನಿರ್ದೇಶಕರು,<br>3. ಶ್ರೀ ಮಂಜುನಾಥ ಹೆಗಡೆ, ಕೆ.ಎಸ್.ಎ.ಎಸ್, ವ್ಯವಸ್ಥಾಪಕ ನಿರ್ದೇಶಕರು.<br>**ಸಭೆಯಲ್ಲಿ ಹಾಜರಿದ್ದ ನಿರ್ದೇಶಕರ ಹೆಸರು:**<br>4. ಶ್ರೀ ಗೋಪಿನಾಥ ಚಾಮರಾಜನಗರ ವೆಂಕಟಕೃಷ್ಣಯ್ಯ<br>5. ಶ್ರೀ ಸುಬ್ರಾಯ ಎಂ ಹೆಗಡೆ<br>6. ಶ್ರೀ ಛಾಯಾಪತಿ ಕೆಟ್ಟನಕೆರೆ ನಾಗಪ್ಪ ಜೋಯಿಸ್<br>7. ಶ್ರೀ ವಸಂತ ಗುರುನಾಥ ನಾಡಜೋಶಿ<br>8. ಶ್ರೀ ಪತ್ತಿ ಚಂದ್ರಶೇಖರ ಶ್ರೀನಿವಾಸ<br>9. ಶ್ರೀ ಮೈಸೂರು ರಾಮಸ್ವಾಮಿ ಬಾಲಕೃಷ್ಣ<br>10. ಶ್ರೀಮತಿ ರಾಮಚಂದ್ರಮೂರ್ತಿ ಚಿಕ್ಕನಾಯಕನಹಳ್ಳಿ ವತ್ಸಲ<br>**ಸಭೆಯಲ್ಲಿ ಹಾಜರಿದ್ದ ವಿಶೇಷ ಆಹ್ವಾನಿತ ನಿರ್ದೇಶಕರ ಹೆಸರು:**<br>11. ಶ್ರೀ ಡಾ॥ ಬಿ.ಎಸ್ ರಾಘವೇಂದ್ರ ಭಟ್<br>12. ಶ್ರೀ ಡಿ ವಿ ರಾಜೇಂದ್ರ ಪ್ರಸಾದ್<br>13. ಶ್ರೀ ಪವನ್ ಕುಮಾರ್.ವಿ<br>14. ಶ್ರೀ ಜಗದೀಶ್ ಹುನಗುಂದ್<br>15. ಶ್ರೀ ವಿನೀತ್ ಶ್ಯಾಮ್ ಭಟ್<br>16. ಶ್ರೀ ಜಗನ್ನಾಥ ಕುಲಕರ್ಣಿ<br>17. ಶ್ರೀ ಎ.ಜಿ. ರಂಗವಿಠ್ಠಲ<br>**ಸಭೆಯಲ್ಲಿ ಹಾಜರಿದ್ದ ವಿಶೇಷ ಆಹ್ವಾನಿತರ ಹೆಸರು:**<br>18. ಶ್ರೀ ರಾಜೇಂದ್ರ.ಜಿ, Chartered Accountant<br>ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ 6 ನೇ ನಿರ್ದೇಶಕ ಮಂಡಳಿ ಸಭೆಯಲ್ಲಿ ಪಾಲ್ಗೊಂಡ ನಿರ್ದೇಶಕರ ಸಂಖ್ಯೆ ಮತ್ತು ಹೆಸರುಗಳನ್ನು ಪರಿಗಣಿಸಲಾಯಿತು. |
| 2 | ಮಂಡಳಿಯ ಅಧ್ಯಕ್ಷರಾದ ಶ್ರೀ ಸಚ್ಚಿದಾನಂದ ಮೂರ್ತಿ ಹಳೇಬೀಡು ಶ್ಯಾಮಣ್ಣ ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡರು. ಸಭೆಯನ್ನು ನಡೆಸಲು ಅಗತ್ಯವಾದ ಕೋರಮ್ ಇರುವ ಕಾರಣ ಮಾನ್ಯ ಅಧ್ಯಕ್ಷರು ಸಭೆಯು ಮಾನ್ಯವಾಗಿದೆ ಎಂದು ನಿರ್ಧರಿಸಿ, ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ನಿರ್ದೇಶಕರನ್ನು ಹಾಗೂ ವಿಶೇಷ ಆಹ್ವಾನಿತ ನಿರ್ದೇಶಕರನ್ನು ಸಭೆಗೆ ಆಹ್ವಾನಿಸಿದರು. |

ವ್ಯವಸ್ಥಾಪಕ ನಿರ್ದೇಶಕರು, ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ನಿರ್ದೇಶಕರಿಗೆ ಸ್ವಾಗತವನ್ನು ಕೋರಿದರು. ತದನಂತರ ಸಭೆಯ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

3 **ಸಭೆಗೆ ಹಾಜರಾಗದ ಅಧಿಕಾರಿಗಳು/ ನಿರ್ದೇಶಕರ ಅನುಪಸ್ಥಿತಿಯನ್ನು ಅಂಗೀಕರಿಸುವ ಬಗ್ಗೆ:**

ಶ್ರೀ ಮಂಜುನಾಥ ಪ್ರಸಾದ್, ಭಾ.ಆ.ಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಮುಜರಾಯಿ) ಹಾಗೂ ಕರ್ನಾಟಕ ಸರ್ಕಾರ ನಾಮ ನಿರ್ದೇಶಿತ ಅಧಿಕಾರಿ ನಿರ್ದೇಶಕರು, ಶ್ರೀ ಕೆ ಎ ದಯಾನಂದ್, ಭಾ.ಆ.ಸೇ,ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಹಾಗೂ ಕರ್ನಾಟಕ ಸರ್ಕಾರ ನಾಮ ನಿರ್ದೇಶಿತ ಅಧಿಕಾರಿ ನಿರ್ದೇಶಕರು, ಶ್ರೀಮತಿ ಭಾನುಮತಿ ಕರುಣಾಕರನ್,ಹೆಚ್ಚುವರಿ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಮುಜರಾಯಿ) ಹಾಗೂ ಕರ್ನಾಟಕ ಸರ್ಕಾರ ನಾಮ ನಿರ್ದೇಶಿತ ಅಧಿಕಾರಿ ನಿರ್ದೇಶಕರು ಮತ್ತು ಶ್ರೀ ಮೇಯರ ಶಿವರಾಮ ಉಡುಪ, ನಿರ್ದೇಶಕರು, ಶ್ರೀ ಕೆ.ರಾಜೇಶ್ ನಡ್ಯಂತಿಲ್ಲಾಯ, ನಿರ್ದೇಶಕರು, ಶ್ರೀ ಗುರುರಾಜ ಕೃಷ್ಣಾಚಾರ್ಯ ಕಟ್ಟಿ, ನಿರ್ದೇಶಕರು, ಶ್ರೀ.ಹೆಚ್.ಸಿ.ಪುರುಷೋತ್ತಮ್, ವಿಶೇಷ ಆಹ್ವಾನಿತ ನಿರ್ದೇಶಕರು, ಶ್ರೀ.ವೇದಬ್ರಹ್ಮ ಡಾ.ವಿ.ಭಾನುಪ್ರಕಾಶ ಶರ್ಮ, ವಿಶೇಷ ಆಹ್ವಾನಿತ ನಿರ್ದೇಶಕರು ಇವರು ಮಂಡಳಿ ಸಭೆಯಲ್ಲಿ ಭಾಗವಹಿಸಲು ಅನಾನುಕೂಲವನ್ನು ವ್ಯಕ್ತಪಡಿಸಿ ಪೂರ್ವಾನುಮತಿಯನ್ನು ಮೌಖಿಕವಾಗಿ ಅಧ್ಯಕ್ಷರಿಂದ ಪಡೆದಿದ್ದ ಕಾರಣ, ಅವರ ಅನುಪಸ್ಥಿತಿಯನ್ನು ರಜೆ ಎಂದು ಪರಿಗಣಿಸಲಾಯಿತು.

4 **5 ನೇ ನಿರ್ದೇಶಕ ಮಂಡಳಿ ಸಭೆಯ ನಡವಳಿಯಲ್ಲಿನ ತಿದ್ದುಪಡಿಯನ್ನು ಪರಿಗಣಿಸಿ ಅಳವಡಿಸಿಕೊಳ್ಳುವುದು.**

ಸಭೆಯ ಸದಸ್ಯರ ಮುಂದೆ 5 ನೇ ನಿರ್ದೇಶಕ ಮಂಡಳಿ ಸಭೆಯ ನಡವಳಿಯನ್ನು ಮಂಡಿಸಲಾಯಿತು ಹಾಗೂ ಕೆಳಕಂಡ ವಿಷಯ ಸೂಚಿಗಳಲ್ಲಿನ ತಿದ್ದುಪಡಿಯನ್ನು ಪರಿಗಣಿಸಿ, ನಡವಳಿಯನ್ನು ಅಂಗೀಕರಿಸಲಾಯಿತು.

a) **ವಿಷಯ ಸೂಚಿ ಸಂಖ್ಯೆ (12)** ರಲ್ಲಿ ತಿಳಿಸಿದಂತೆ ಸಾಂದೀಪನಿ ಶಿಷ್ಯವೇತನ ಯೋಜನೆಯಡಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಸಿದ್ದಪಡಿಸಿದ ಮಾರ್ಗಸೂಚಿಯಲ್ಲಿ ಎಲ್ಲಾ ಗುಂಪುವಾರು ಕೋರ್ಸ್ ಗಳಿಗೆ ಗರಿಷ್ಠ ಮೊತ್ತ ನಿಗದಿಪಡಿಸಲಾಗಿತ್ತು (ಉದಾ: ಗ್ರೂಪ್ 'ಎ', ಗ್ರೂಪ್ 'ಬಿ' etc). ದಿನಾಂಕ:11-02-2021 ರಂದು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ, ಇ ಆಡಳಿತ ಇಲಾಖೆಯ ಯೋಜನಾ ನಿರ್ದೇಶಕರೊಂದಿಗೆ ಚರ್ಚಿಸಿದಂತೆ, ಪ್ರಸ್ತುತ ಸರ್ಕಾರವು ವಿವಿಧ ಸೀಟುಗಳಿಗೆ ನಿಗದಿಪಡಿಸಿರುವ ಶುಲ್ಕವನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿರುವ ಹಿನ್ನಲೆಯಲ್ಲಿ ಗುಂಪುವಾರು ಕೋರ್ಸ್ ಗಳಿಗೆ ಮಂಡಳಿಯಿಂದ ನಿಗದಿಪಡಿಸಿರುವ 'ಗರಿಷ್ಠ ಮಿತಿ' ಯನ್ನು ರದ್ದುಪಡಿಸಿ, ಸರ್ಕಾರದ ಆದೇಶದಂತೆ ಶುಲ್ಕ ಮರುಪಾವತಿಸಲು ಸಮ್ಮತಿಸಿ ದಿನಾಂಕ: 30-12-2020 ರ 5 ನೇ ನಿರ್ದೇಶಕ ಮಂಡಳಿಯ ನಡವಳಿಯನ್ನು ತಿದ್ದುಪಡಿ ಮಾಡಲು ಸಭೆಯ ಅನುಮೋದನೆಗಾಗಿ ಕೋರಲಾಗಿದ್ದು, ಸದರಿ ತಿದ್ದುಪಡಿಗೆ ಮಂಡಳಿ ಸಭೆಯಲ್ಲಿ ಘಟನೋತ್ತರ ಅನುಮೋದನೆ ನೀಡಲಾಯಿತು.

b) **ವಿಷಯ ಸೂಚಿ ಸಂಖ್ಯೆ (20)** ರಲ್ಲಿ ತಿಳಿಸಿದಂತೆ 2019-20 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿಪ್ರ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಯೋಜನೆಯಡಿ ಪ್ರತಿ ಜಿಲ್ಲೆಯಲ್ಲಿ ಮೊದಲ ಮೂರು ಸ್ಥಾನ ಪಡೆದ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಈಗಾಗಲೇ ನಿರ್ಣಯ ಕೈಗೊಂಡಂತೆ ನೇರ ನಗದು ವರ್ಗಾವಣೆ (DBT) ಯನ್ನು ಮಂಡಳಿಯ SBI ನ ಉಳಿತಾಯ ಖಾತೆಯ ಮೂಲಕ ವಿದ್ಯಾರ್ಥಿಗಳ ಖಾತೆಗೆ (ಲೆಕ್ಕ ಶೀರ್ಷಿಕೆ 4059-80-051-0-55 -132ಯಡಿ) ಪಾವತಿಸಲು ಸಭೆಯು ಅನುಮೋದನೆ ನೀಡಿದ್ದು. ಈ ಉದ್ದೇಶಕ್ಕಾಗಿ ಮಂಡಳಿಯ ಸಭೆಯಲ್ಲಿ ಸಲ್ಲಿಸಲಾದ ವಿದ್ಯಾರ್ಥಿಗಳ ಪಟ್ಟಿಯಲ್ಲಿ ಉಡುಪಿ ಜಿಲ್ಲೆಯ ಅನಿಷ್ ಜೋಷಿ ಎಂಬ ವಿದ್ಯಾರ್ಥಿಯನ್ನೊಳಗೊಂಡಂತೆ ಒಟ್ಟು 144 ವಿದ್ಯಾರ್ಥಿಗಳಿದ್ದರು. ಆದರೆ ಉಡುಪಿ ಜಿಲ್ಲೆಯ ಅನಿಷ್ ಜೋಷಿ ಎಂಬ ವಿದ್ಯಾರ್ಥಿಗೆ ಸೂಕ್ತ ದಾಖಲೆಗಳನ್ನು ಒದಗಿಸುವಂತೆ ಕೋರಿದ ವೇಳೆ ಹಾಗೂ ಮಂಡಳಿಯ ಪರವಾಗಿ ನಡೆಸುವ ಸನ್ಮಾನ ಕಾರ್ಯಕ್ರಮಕ್ಕೆ ಭಾಗವಹಿಸುವಂತೆ ಕೋರಿದ ವೇಳೆಯಲ್ಲಿ ಸದರಿ ವಿದ್ಯಾರ್ಥಿಯಿಂದ ಯಾವುದೇ ಆಸಕ್ತಿ ಕಂಡುಬಂದಿಲ್ಲದ ಕಾರಣ ಈ ವಿದ್ಯಾರ್ಥಿಗೆ ಪ್ರೋತ್ಸಾಹ ಧನವನ್ನು ಪಾವತಿ ಮಾಡಲಾಗಿರುವುದಿಲ್ಲ. ಹಾಗೂ ಇದೇ ಸಂದರ್ಭದಲ್ಲಿ ಮಂಗಳೂರಿನ ವಿದ್ಯಾರ್ಥಿನಿಯಾದ ಪ್ರಕೃತಿ.ಡಿ ಇವರು ಮಂಡಳಿಯಿಂದ ದಾಖಲೆಗಳನ್ನು ಒದಗಿಸುವಂತೆ ಕೋರಿ ಕರೆಮಾಡಿದ ಸಂದರ್ಭದಲ್ಲಿ ಯಾವುದೇ ಆಸಕ್ತಿ ತೋರದಿದ್ದರೂ, ಮಂಡಳಿಯ ನಿರ್ದೇಶಕರ ಕರೆಗೆ ಓಗೊಟ್ಟು ಮಂಗಳೂರಿನ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ, ತದನಂತರ ದಾಖಲೆಗಳನ್ನು ಕಛೇರಿಗೆ ಸಲ್ಲಿಸಿರುತ್ತಾರೆ. ಈ ವೇಳೆಗಾಗಲೇ ಮಂಡಳಿಯ ಸಭೆಯಲ್ಲಿ ನಿರ್ಣಯಿಸಿದ ವಿದ್ಯಾರ್ಥಿಗಳ ಪಟ್ಟಿಯಲ್ಲಿ ಮಂಗಳೂರಿನ ಪ್ರಕೃತಿ.ಡಿ ಎಂಬ ವಿದ್ಯಾರ್ಥಿಯ ಹೆಸರಿಲ್ಲದ ಕಾರಣ, **ಪ್ರಸ್ತುತ ಉಡುಪಿಯ ಅನಿಷ್ ಜೋಷಿ ಎಂಬ ವಿದ್ಯಾರ್ಥಿಯ ಬದಲಿಗೆ ಸೂಕ್ತ ದಾಖಲೆಗಳನ್ನು ಒದಗಿಸಿರುವ ಮಂಗಳೂರಿನ ಪ್ರಕೃತಿ.ಡಿ ಎಂಬ ವಿದ್ಯಾರ್ಥಿಯನ್ನು ಪರಿಗಣಿಸುವಂತೆ** ತಿದ್ದುಪಡಿಮಾಡಿದ್ದು ಪರಿಷ್ಕೃತ ವಿದ್ಯಾರ್ಥಿಗಳ ಪಟ್ಟಿಯನ್ನು ಸಭೆಯಲ್ಲಿ ಅನುಮೋದಿಸಲಾಯಿತು.

5 **<u>ಸರ್ಕಾರದಿಂದ ಮಂಡಳಿಗೆ ಹೊಸದಾಗಿ ನೇಮಕವಾದ ಅಧಿಕಾರಿ ನಿರ್ದೇಶಕರ, ಅಧಿಕಾರೇತರ ನಿರ್ದೇಶಕರ ಹೆಸರನ್ನು ನಿರ್ದೇಶಕ ಸ್ಥಾನಕ್ಕೆ ಪರಿಗಣಿಸುವ ಬಗ್ಗೆ:</u>**

ಕರ್ನಾಟಕ ಸರ್ಕಾರದಿಂದ ಹೊರಡಿಸಲಾದ ಅಧಿಸೂಚನೆಯಂತೆ ಶ್ರೀ ಎಂ ಮಹೇಂದ್ರ ಜೈನ್ ಭಾ.ಆ.ಸೇ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು , ಕಂದಾಯ ಇಲಾಖೆ (ಮುಜರಾಯಿ) ಇವರ ಸ್ಥಾನದಲ್ಲಿ ಶ್ರೀ ಮಂಜುನಾಥ್ ಪ್ರಸಾದ್ ಭಾ.ಆ.ಸೇ, ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಇವರ ನೇಮಕಾತಿಯನ್ನು ಪರಿಗಣಿಸಲಾಯಿತು. ಹಾಗೂ ಶ್ರೀ ಮುಕುಂದ್ ಭಿಕಾಜಿ ನಾತು ರವರ ನಿಧನದಿಂದಾಗಿ ತೆರವಾದ ಸ್ಥಾನಕ್ಕೆ ಸರ್ಕಾರದಿಂದ ಆಯ್ಕೆ ಮಾಡಲಾದ ಶ್ರೀ ವಸಂತ ಗುರುನಾಥ ನಾಡಜೋಶಿ ಇವರನ್ನು ಅಧಿಕಾರೇತರ ನಿರ್ದೇಶಕರ ಸ್ಥಾನಕ್ಕೆ ಪರಿಗಣಿಸಲಾಯಿತು.

"ಕಂಪನಿಗಳ ಕಾಯ್ದೆ, 2013 ರ ನಿಬಂಧನೆಗಳು ಮತ್ತು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇ-ಡಿಪಿಎಆರ್ 149 ಎಸ್ ಎ ಎಸ್ 2021 ದಿ:31-03-2021–ರ ಅನುಸಾರ", ಶ್ರೀ. ಮಂಜುನಾಥ್ ಪ್ರಸಾದ್ ಭಾ.ಆ.ಸೇ ರವರನ್ನು ಕಂಪನಿಯ ನಾಮಿನಿ ನಿರ್ದೇಶಕರಾಗಿ ನೇಮಿಸಿಕೊಳ್ಳಲಾಗಿದೆ.

"ಕಂಪನಿಗಳ ಕಾಯ್ದೆ, 2013 ರ ನಿಬಂಧನೆಗಳ ಮತ್ತು ಸರ್ಕಾರದ ಆದೇಶದ ಅನುಸಾರ", ಕಂಇ 30 ಮುಅಬಿ 2021 ದಿನಾಂಕ:19-04-2021 ರ ಕರ್ನಾಟಕ ಸರ್ಕಾರದ ಆದೇಶ ಮತ್ತು ಅಗತ್ಯವಿರುವ ಇತರ ದಾಖಲೆಗಳನ್ನೊಳಗೊಂಡು, ಶ್ರೀ ವಸಂತ ಗುರುನಾಥ ನಾಡಜೋಶಿ ರವರನ್ನು ಕಂಪನಿಯ ನಾಮಿನಿ ನಿರ್ದೇಶಕರಾಗಿ ನೇಮಿಸಿಕೊಳ್ಳಲಾಗಿದೆ.

ಈ ಮೇಲಿನ ನೇಮಕಾತಿ ನಿರ್ಣಯವನ್ನು ಜಾರಿಗೆ ತರಲು ಕಂಪನಿಗಳ ರಿಜಿಸ್ಟ್ರಾರ್‌ಗೆ Form DIR 12 ಅನ್ನು ಸಲ್ಲಿಸುವುದು ಸೇರಿದಂತೆ ಅಗತ್ಯವಿರುವ ಎಲ್ಲಾ ಕಾರ್ಯಗಳನ್ನು ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರಿಗೆ ತಾತ್ಕಾಲಿಕ ಕಂಪನಿ ಕಾರ್ಯದರ್ಶಿಯವರ ಮೂಲಕ ನಿರ್ವಹಿಸಿಕೊಳ್ಳಲು ಈ ಮೂಲಕ ಅಧಿಕಾರ ನೀಡಲಾಯಿತು.

6 **<u>ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಆರ್ಥಿಕ ವರ್ಷ 2019-20 ರ ಆರ್ಥಿಕ ವರದಿಯ ಲೆಕ್ಕಪರಿಶೋಧನಾ ಕಾರ್ಯವನ್ನು (Supplementary Audit) ಮಹಾಲೇಖಪಾಲಕರು ಕೈಗೊಂಡಿದ್ದು (ದಿನಾಂಕ 16-03-2021 ರಿಂದ 20-03-2021 ರ ವರೆಗೆ). ಸದರಿ ಲೆಕ್ಕ ಪರಿಶೀಲನೆಯಲ್ಲಿ ಈ ಹಿಂದೆ ದಿನಾಂಕ 31-12-2020 ರಂದು ಮಂಡಳಿಯ ವತಿಯಿಂದ ಸಲ್ಲಿಸಲಾದ Financial Statement ಗೆ ಸಂಬಂಧಿಸಿದಂತೆ Note No.1 to 7 ನ್ನು ನೀಡಿದ್ದು, ಇದಕ್ಕೆ ಪ್ರತಿಯಾಗಿ ಸಿದ್ದಪಡಿಸಲಾದ ಪರಿಷ್ಕೃತ Financial Statement ನ್ನು ಅನುಮೋದಿಸುವ ಬಗ್ಗೆ ಹಾಗೂ ಸದರಿ ಪರಿಷ್ಕೃತ Financial Statement ಮೇಲೆ ಕಂಪನಿಯ Statutory Auditor ಆದ AGIWAL and CO., ರವರು ನೀಡಿದ ಪರಿಷ್ಕೃತ Draft Audit Report ನ್ನು ಪರಿಗಣಿಸುವ ಬಗ್ಗೆ.</u>**

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಆರ್ಥಿಕ ವರ್ಷ 2019-20 ರ ಆರ್ಥಿಕ ವರದಿಯ ಲೆಕ್ಕಪರಿಶೋಧನಾ ಕಾರ್ಯ (Supplementary Audit)ವನ್ನು ಮಹಾಲೇಖಪಾಲಕರು ಕೈಗೊಂಡಿದ್ದು (ದಿನಾಂಕ 16-03-2021 ರಿಂದ 20-03-2021 ರ ವರೆಗೆ). ಸದರಿ ಲೆಕ್ಕ ಪರಿಶೋಧನೆಯಲ್ಲಿ ಈ ಹಿಂದೆ ದಿನಾಂಕ 31-12-2020 ರಂದು ಮಂಡಳಿಯ ವತಿಯಿಂದ ಸಲ್ಲಿಸಲಾದ Financial Statement ಗೆ ಸಂಬಂಧಿಸಿದಂತೆ Note No.1 to 7 ನ್ನು ನೀಡಿದ್ದು, ಇದಕ್ಕೆ ಪ್ರತಿಯಾಗಿ ಸಿದ್ದಪಡಿಸಲಾದ ಪರಿಷ್ಕೃತ Financial Statement (ಅನುಬಂಧ-3) ನ್ನು ಸಭೆಯು ಅನುಮೋದಿಸಿತು ಹಾಗೂ ಸದರಿ ಪರಿಷ್ಕೃತ Financial Statement ಮೇಲೆ ಕಂಪನಿಯ Statutory Auditor ಆದ AGIWAL and CO., ರವರು ನೀಡಿದ ಪರಿಷ್ಕೃತ Draft Audit Report ನ್ನೂ ಸಹ ಸಭೆಯು ಸರ್ವಾನುಮತದಿಂದ ಯಥಾಸ್ಥಿತಿ ಸರಿ ಇದೆ ಎಂದು ಒಪ್ಪಿ ಅನುಮೋದಿಸಿತು.

7 **<u>ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಆರ್ಥಿಕ ವರ್ಷ 2020-21 ರ ಆರ್ಥಿಕ ವರದಿ ( Profit & Loss, Balance sheet ಇತ್ಯಾದಿ) ವರದಿಗಳನ್ನು ಮಂಡಳಿಯ ಸಭೆಯಲ್ಲಿ ಅನುಮೋದಿಸಿ, Comptroller and Auditor General of India, New Delhi ಇವರಿಂದ ಮಂಡಳಿಯ ಲೆಕ್ಕಪರಿಶೋಧನೆಗಾಗಿ ಆಯ್ಕೆಯಾದ AGIWAL and CO., ಸಂಸ್ಥೆಯವರಿಗೆ ಕಳುಹಿಸಿಕೊಡುವ ಬಗ್ಗೆ.</u>**

ಮಂಡಳಿಯ 2020-21 ನೇ ಸಾಲಿನ ಆರ್ಥಿಕ ವರದಿ ( Profit & Loss, Balance sheet ಇತ್ಯಾದಿ) ಗಳನ್ನು ಮಂಡಳಿಯ ಸಭೆಯಲ್ಲಿ ಮಂಡಿಸಲಾಯಿತು. ವರದಿಯನ್ನು ಸಂಪೂರ್ಣವಾಗಿ ಒಪ್ಪಿ ಸದರಿ ವರದಿಯನ್ನು Comptroller and Auditor General of India, New Delhi ಇವರಿಂದ ಮಂಡಳಿಯ ಲೆಕ್ಕಪರಿಶೋಧನೆಗಾಗಿ ಆಯ್ಕೆಯಾದ M/s AGIWAL and CO., ಸಂಸ್ಥೆಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ಸಭೆಯು ನಿರ್ಧರಿಸಿತು. ಸದರಿ ಸಂಸ್ಥೆಯಿಂದ ಲೆಕ್ಕಪರಿಶೋಧನೆಯಾದ ನಂತರ 2020-21 ನೇ ಸಾಲಿನ ಆರ್ಥಿಕ ವರದಿಯನ್ನು ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು ಇವರಿಗೆ ಕಳುಹಿಸಿ ಸದರಿಯವರಿಂದ ಮಂಡಳಿಯ ಶಾಸನಬದ್ದ ಲೆಕ್ಕ ಪರಿಶೋಧನೆಯನ್ನು ನಡೆಸಿಕೊಡುವಂತೆ ಕೋರಲು ಸಭೆಯು ನಿರ್ಧರಿಸಿತು.

8 **<u>ಸರ್ಕಾರದ ಆದೇಶ ಸಂಖ್ಯೆ: ಕಂಇ 30 ಮುಅಬಿ 2021 ದಿನಾಂಕ:16-03-2021 ರಂತೆ ಈ ಹಿಂದೆ ಮಂಡಳಿಯಿಂದ ಸಲ್ಲಿಸಲಾದ 2020-21 ನೇ ಸಾಲಿನ ಕ್ರಿಯಾ ಯೋಜನೆಯ ಪ್ರಸ್ತಾವನೆಗೆ, ಸ್ಪಷ್ಟೀಕರಣ ನೀಡಲು ಕೋರಿರುವ ಹಿನ್ನಲೆಯಲ್ಲಿ ಸದರಿ ಸ್ಪಷ್ಟೀಕರಣ ಕುರಿತು ಚರ್ಚಿಸುವ ಬಗ್ಗೆ.</u>**

2020-21 ನೇ ಸಾಲಿಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಈ ಕಛೇರಿಯ ಕೆ.ಬಿ.ಡಿ.ಬಿ ಸಿ.ಆರ್ 08/2020-21 ದಿನಾಂಕ:22-02-2021 ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಸದರಿ ಕ್ರಿಯಾ ಯೋಜನೆಗೆ ಸರ್ಕಾರವು, ಕಂಇ 30 ಮುಅಬಿ 2021 ದಿನಾಂಕ:16-03-20201 ರ ಪತ್ರದಲ್ಲಿ ಈ ಕೆಳಕಂಡ ಮಂಡಳಿಯ ಯೋಜನೆಗಳಿಗೆ ಸರ್ಕಾರವು ಆಕ್ಷೇಪಿಸಿ ಸ್ಪಷ್ಟೀಕರಣವನ್ನು ನೀಡಲು ಕೋರಿರುವ ಹಿನ್ನಲೆಯಲ್ಲಿ ಸದರಿ ಸ್ಪಷ್ಟೀಕರಣವನ್ನು ಮಾನ್ಯ ಅಧ್ಯಕ್ಷರ ನಿರ್ದೇಶನದಂತೆ ಸಭೆಯಲ್ಲಿ ಓದಿ ಎಲ್ಲಾ ನಿರ್ದೇಶಕರ ಗಮನಕ್ಕೆ ತರಲಾಯಿತು. ಹಾಗೂ ಸರ್ಕಾರಕ್ಕೆ ನೀಡಬೇಕಾದ ಎಲ್ಲಾ ನಾಲ್ಕೂ ಸ್ಪಷ್ಟೀಕರಣದ ಕುರಿತು ಮಂಡಳಿಯ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಹಾಗೂ ಈ ಕೆಳಕಂಡಂತೆ ಸರ್ಕಾರಕ್ಕೆ ಸ್ಪಷ್ಟೀಕರಣವನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಿ, ಸದರಿ ಸ್ಪಷ್ಟೀಕರಣವನ್ನೇ ಸರ್ಕಾರಕ್ಕೆ ಕಳುಹಿಸಿಕೊಡಲು ವ್ಯವಸ್ಥಾಪಕ ನಿರ್ದೇಶಕರಿಗೆ ತಿಳಿಸಲಾಯಿತು.

**1. ಅಧ್ಯಕ್ಷರಿಗೆ ವಿವೇಚನಾ ಕೋಟಾ ನೀಡಿದಲ್ಲಿ ಪಾರದರ್ಶಕತೆ ಬರಲು ಸಾಧ್ಯವೇ ಹಾಗೂ ಸದರಿ ಶಿಷ್ಯವೇತನ ಯೋಜನೆಯನ್ನು ಆನ್ ಲೈನ್ ಮೂಲಕ ಜಾರಿಗೊಳಿಸಲು ಇರುವ ತೊಂದರೆಗಳೇನು ಹಾಗೂ ಇದೇ ರೀತಿಯ ಬೇರೆ ನಿಗಮ / ಮಂಡಳಿಗಳಲ್ಲಿ ಜಾರಿಯಲ್ಲಿದೆಯೇ ?**

ಮಂಡಳಿಯು ದಿನಾಂಕ:30-12-2020 ರಲ್ಲಿ ನಡೆಸಿದ ಸಭೆಯಲ್ಲಿ ಅಧ್ಯಕ್ಷರ ವಿವೇಚನಾ ಕೋಟಾದಲ್ಲಿ ಶಿಷ್ಯವೇತನವನ್ನು ನೀಡುವ ಕುರಿತು ವಿಸ್ತೃತವಾಗಿ ಚರ್ಚಿಸಿ ನಿರ್ಣಯ ತೆಗೆದುಕೊಂಡಿದೆ ಏಕೆಂದರೆ,

ಸಾಂದೀಪನಿ ಶಿಷ್ಯವೇತನ ಮಂಡಳಿಯ ಮೊದಲನೇ ವರ್ಷದಲ್ಲಿ ಹಾಕಿಕೊಂಡಿರುವ ಪ್ರಮುಖ ಯೋಜನೆಯಾಗಿದ್ದು, ಇದರ ಉದ್ದೇಶ ಗ್ರಾಮೀಣ ಭಾಗಗಳ ಕುಗ್ರಾಮಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸಮುದಾಯದ ಅರ್ಹ ಬಡ ವಿದ್ಯಾರ್ಥಿಗಳಿಗೆ ನೆರವು ನೀಡುವುದಾಗಿದೆ. ಅನೇಕರು ತುಂಬಾ ಬಡವರಿದ್ದು ಅವರಿಗೆ SSP Portal ನಲ್ಲಿ ಸಕಾಲದಲ್ಲಿ ತಮ್ಮ ಅರ್ಜಿ ಸಲ್ಲಿಸಲು ಆಗುತ್ತಿಲ್ಲ ಎಂಬುದು ಕಂಡುಬಂದಿದೆ. ಜೊತೆಗೆ ಇನ್ನೂ ಇದು ಮೊದಲನೇ ವರ್ಷವಾದ್ದರಿಂದ ಹಲವಾರು ಅರ್ಹ ವಿದ್ಯಾರ್ಥಿಗಳಿಗೆ ಸಾಂದೀಪನಿ ಯೋಜನೆ ಕುರಿತು ಅರಿವೇ ಇಲ್ಲ. ಮಂಡಳಿಯ ಮಾನ್ಯ ಅಧ್ಯಕ್ಷರು ಹಾಗೂ ನಿರ್ದೇಶಕರು ಜಿಲ್ಲಾ ಮತ್ತು ತಾಲ್ಲೂಕು-ಹೋಬಳಿಗಳಿಗೆ ಪ್ರವಾಸ ಮಾಡುವ ಸಂದರ್ಭದಲ್ಲಿ ಶೈಕ್ಷಣಿಕವಾಗಿ ತುಂಬಾ ಅರ್ಹತೆ ಇರುವ ಬಡ ವಿದ್ಯಾರ್ಥಿಗಳಿಗೆ ವಿದ್ಯುತ್ ಸೌಲಭ್ಯ / ಕಂಪ್ಯೂಟರ್/ ಇಂಟರ್ನೆಟ್ ಸೌಲಭ್ಯ ಇಲ್ಲದಿರುವುದರಿಂದ ಆನ್‌ಲೈನ್ ಅರ್ಜಿ ಸಲ್ಲಿಸಲಾಗದೇ ಶಿಷ್ಯವೇತನದಿಂದ ವಂಚಿತರಾಗಿದ್ದಾರೆ ಎಂಬುದು ತಿಳಿದು ಬಂದಿರುತ್ತದೆ. ಅಂತಹ ವಿದ್ಯಾರ್ಥಿಗಳಿಂದ ಭೌತಿಕ ಅರ್ಜಿ, ದಾಖಲೆ, EWS, ಆಧಾರ್ ಪಡೆದು ಶಿಷ್ಯವೇತನ ನೀಡುವ ಸಲುವಾಗಿ ವಿವೇಚನಾ ಕೋಟಾ ಇಟ್ಟುಕೊಳ್ಳಲು ತೀರ್ಮಾನಿಸಲಾಗಿದೆ. ಒಂದು ವೇಳೆ EWS certificate ಪಡೆಯಲು ವಿಫಲವಾದುದು ಕಂಡುಬಂದ ಪ್ರಕರಣಗಳಲ್ಲಿ ಸರ್ಕಾರದಿಂದ ನೀಡಲಾದ BPL card/ ಆದಾಯ ಪ್ರಮಾಣ ಪತ್ರವನ್ನು ಪರಿಗಣಿಸಿ, ಈ ವಿವೇಚನಾ ಕೋಟಾದಡಿಯಲ್ಲಿ ಆಫ್‌ಲೈನ್ ಮೂಲಕ ಶಿಷ್ಯವೇತನ ನೀಡುವಾಗ ಇತರ ಅರ್ಹತಾ ಆಧಾರದ ಮೇಲೆ, ಹಾಗೂ ವಿದ್ಯಾರ್ಥಿಗಳು ಆನ್ ಲೈನ್ ನಲ್ಲಿ ಸಲ್ಲಿಸಬೇಕಾದ ಎಲ್ಲಾ ದಾಖಲಾತಿಗಳನ್ನು ಕಡ್ಡಾಯವಾಗಿ ಪಡೆದೇ ಅರ್ಹ ಪ್ರಕರಣದಲ್ಲಿ ಶಿಷ್ಯವೇತನ ನೀಡುಲಾಗುವುದು ಹಾಗೂ SSP Portal ನ ವಿಧಾನದಂತೆ ಶಿಷ್ಯವೇತನ ಹಣವನ್ನು ಫಲಾನುಭವಿಯ ಆಧಾರ ಜೋಡಿತ ಬ್ಯಾಂಕ್ ಖಾತೆಗೆ ನೇರವಾಗಿ DBT ಮೂಲಕ ಶಿಷ್ಯವೇತನವನ್ನು ನೀಡಲಾಗುವುದು. ಈ ವಿವೇಚನಾ ಕೋಟಾದಲ್ಲಿ ಅವಕಾಶ ಕಳೆದುಕೊಂಡ ವಿದ್ಯಾರ್ಥಿಗಳಿಗೆ ಮಾನವೀಯತೆ ಆಧಾರದ ಮೇಲೆ ಸಹಾಯ ಮಾಡುವ ಏಕೈಕ ಉದ್ದೇಶವಿದ್ದು, ಇದರಲ್ಲಿ ಪಾರದರ್ಶಕತೆ ಸಂಪೂರ್ಣವಾಗಿದೆ ಮತ್ತು ಮಂಡಳಿಯು ಈ ಸಾಲಿನಲ್ಲಿ ನೀಡುತ್ತಿರುವ ಒಟ್ಟು ಶಿಷ್ಯವೇತನ ಮೊತ್ತದ ಅಂದಾಜು ಪ್ರತಿಶತ 5 ರಷ್ಟನ್ನು ಮಾತ್ರ ಅಧ್ಯಕ್ಷರ ವಿವೇಚನಾ ಕೋಟಾದಡಿ ನೀಡಲು ಮಂಡಳಿಯು ಸರ್ವಾನುಮತದಿಂದ ತೀರ್ಮಾನಿಸಿದೆ. ಇದಕ್ಕೆ ಸರ್ಕಾರ ಅನುಮತಿ ನೀಡಬೇಕೆಂದು ಕೋರಲಾಗಿದೆ.

**2. ಕಲ್ಯಾಣ ಯೋಜನೆಯಡಿ 'ಅರುಂಧತಿ'ಯೋಜನೆಗೆ ತತ್ಸಮಾನ ಯೋಜನೆಯಡಿ ಈಗಾಗಲೇ**

**ಧಾರ್ಮಿಕ ದತ್ತಿ ಇಲಾಖೆಯಲ್ಲಿ ಸಪ್ತಪದಿ ಯೋಜನೆಯು ಚಾಲ್ತಿಯಲ್ಲಿದ್ದು ಬ್ರಾಹ್ಮಣ ಸಮಾಜವೂ ಕೂಡ ಸದರಿ ಯೋಜನೆಯನ್ನು ಸದುಪಯೋಗ ಪಡೆದುಕೊಳ್ಳಬಹುದಾಗಿದೆ.**

ಈ ಯೋಜನೆಗೆ ತತ್ಸಮಾನ ಯೋಜನೆ ಧಾರ್ಮಿಕದತ್ತಿ ಇಲಾಖೆಯಡಿ ಇದ್ದರೂ ಸಹ ಈ ಯೋಜನೆಯಲ್ಲಿ ಇದುವರೆಗೆ ಬ್ರಾಹ್ಮಣ ಸಮುದಾಯದ ಅರ್ಹ ಬಡ ಹೆಣ್ಣು ಮಕ್ಕಳಿಗೆ ಅದರ ಪ್ರಯೋಜನ ಸಿಗುತ್ತಿಲ್ಲ ಎಂಬುದನ್ನು ಮಂಡಳಿ ಗಮನಿಸಿದೆ. ಮಂಡಳಿಯ ಯೋಜನೆಗಳು ವಾರ್ಷಿಕ 8 ಲಕ್ಷಕ್ಕಿಂತ ಕಡಿಮೆ ಆದಾಯ ಇರುವ ಹೆಣ್ಣು ಮಕ್ಕಳಿಗೂ ಅನ್ವಯಿಸುವುದರಿಂದ, ಧಾರ್ಮಿಕ ದತ್ತಿ ಇಲಾಖೆಯ ಯೋಜನೆಯಡಿ ಪ್ರಯೋಜನ ಪಡೆದುಕೊಳ್ಳದ ಬ್ರಾಹ್ಮಣ ಸಮುದಾಯಾದ ಹೆಣ್ಣು ಮಕ್ಕಳಿಗೆ ಈ ಯೋಜನೆ ರೂಪಿಸಲಾಗಿದೆ. ಜೊತೆಗೆ ಮಂಡಳಿಯು ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಶಾಸನಬದ್ಧವಾಗಿ ರಚಿಸಿದ ವಿಶೇಷ ಉದ್ದೇಶಿತ ವಾಹಕ (SPV) ಆಗಿರುವುದರಿಂದ, ಬೇರೆ ಇಲಾಖೆಗಳಲ್ಲಿ ಇಂತಹ ಯೋಜನೆಗಳಿವೆ ಎಂಬ ಕಾರಣಗಳಿಂದ ಮಂಡಳಿಯು ಈ ಯೋಜನೆ ಮಾಡಬಾರದು ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ.

**3. ಕಲ್ಯಾಣ ಯೋಜನೆಯ 'ಮೈತ್ರೇಯಿ' ಯೋಜನೆಯಡಿ ಬ್ರಾಹ್ಮಣರಲ್ಲಿ ಯಾರು ಪುರೋಹಿತರು, ಯಾರು ಅಡುಗೆ ಭಟ್ಟರು, ಯಾರು ಅರ್ಚಕರು ಎಂಬ ಬಗ್ಗೆ ಸರ್ಕಾರದಿಂದ ಸರ್ವೇ ಮಾಡಿರುವುದಿಲ್ಲ, ಆದ್ದರಿಂದ ಇಂತಹ ಬ್ರಾಹ್ಮಣರನ್ನು ಗುರುತಿಸುವ ಮಾನದಂಡವೇನು? ತಹಶೀಲ್ದಾರರ ಮೂಲಕ ಸದರಿ ಫಲಾನುಭವಿಗಳ ಆಯ್ಕೆ ಮಾಡಲು ಸರ್ಕಾರದ ಹಂತದಲ್ಲಿ ಇಲ್ಲಿಯವರೆವಿಗೂ ಯಾವುದೇ ಪ್ರಕ್ರಿಯೆ ನಡೆದಿರುವುದಿಲ್ಲ. ಹಾಗೂ ಇಂತಹ ಯೋಜನೆಗಳು ಸರ್ಕಾರದ ಇತರೇ ಯಾವುದೇ ಇಲಾಖೆಯಲ್ಲಿ/ ಮಂಡಳಿ/ ನಿಗಮಗಳಲ್ಲಿ ಜಾರಿಯಾದ ಬಗ್ಗೆ ಮಾಹಿತಿ ಇದ್ದಲ್ಲಿ ಅದರೊಂದಿಗೆ ಪ್ರಸ್ತಾವನೆ ಸಲ್ಲಿಸುವುದು . ಇದರಡಿ ಫಲಾನುಭವಿಗಳೆಷ್ಟು?**

ಇತ್ತೀಚಿನ ವರ್ಷಗಳಲ್ಲಿ ಯುವ ಬ್ರಾಹ್ಮಣ ಪುರೋಹಿತ/ ಅರ್ಚಕ ಹಾಗೂ ಅಡಿಗೆ ಕಾರ್ಮಿಕರಿಗೆ ವಧುಗಳು ಸಿಗದೇ ಅವರ ಸಂತತಿ ಕ್ಷೀಣಿಸುತ್ತಿದೆ. ಈ ಸಾಮಾಜಿಕ ಸಮಸ್ಯೆಯ ಪರಿಹಾರಕ್ಕಾಗಿ ಅಂತಹ ಅರ್ಹ ವ್ಯಕ್ತಿಗಳನ್ನು ಸಮುದಾಯದ ಹೆಣ್ಣುಮಕ್ಕಳು ಮದುವೆಯಾಗುವಂತೆ ಪ್ರೋತ್ಸಾಹಿಸುವ ಉದ್ದೇಶದಿಂದ ವಧುಗಳಿಗೆ ತಲಾ ರೂ. 3 ಲಕ್ಷರೂಪಾಯಿಗಳ ಬಾಂಡ್ ನೀಡಲು ಮಂಡಳಿಯು ಸರ್ವಾನುಮತದಿಂದ ನಿರ್ಣಯಿಸಿದೆ. ಹೀಗೆ ಮಾಡುವಾಗ ವಧು ವರರಿಬ್ಬರೂ ಬ್ರಾಹ್ಮಣರೆಂದು ಸಕ್ಷಮ ಕಂದಾಯ ಅಧಿಕಾರಿಗಳಿಂದ ಕಡ್ಡಾಯವಾಗಿ ದೃಢೀಕರಣ ಪತ್ರ ಸಲ್ಲಿಸಬೇಕು. ಜೊತೆಗೆ ಕಂದಾಯ ನಿರೀಕ್ಷಕರಿಂದ ತಾವು ಪುರೋಹಿತರು/ ಅರ್ಚಕರು/ ಅಡಿಗೆ ವೃತ್ತಿಯವರೆಂದು ದೃಢೀಕರಣ ಪತ್ರ ಸಲ್ಲಿಸಬೇಕು. ಈ ಬಾಂಡ್ ಗಳನ್ನು ವಧುವಿನ ಹಾಗೂ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರ ಹೆಸರಿನಲ್ಲಿ ಜಂಟಿಯಾಗಿ ಖರೀದಿಸಲಾಗುತ್ತಿದ್ದು, ಅವು ದುರುಪಯೋಗವಾಗದಂತೆ ಮೂರು ವರ್ಷಗಳವರೆಗೆ ಮಂಡಳಿಯ ಅಭಿರಕ್ಷೆಯಲ್ಲಿರುತ್ತವೆ. ಈ ಮೂರು ವೃತ್ತಿಗಳಲ್ಲಿ ಬ್ರಾಹ್ಮಣರೇ ಹೆಚ್ಚಿರುವುದರಿಂದ ಬೇರೆ ಮಂಡಳಿಗಳು /ನಿಗಮಗಳು ಇದುವರೆಗೆ ಈ ತರಹದ ಯೋಜನೆಗಳನ್ನು ಕೈಗೊಂಡಿರುವುದು ಕಂಡುಬಂದಿರುವುದಿಲ್ಲ ಹಾಗೂ ಈ ಕುರಿತು ಮಾಹಿತಿ ಮಂಡಳಿಯಲ್ಲಿ ಲಭ್ಯವಿಲ್ಲ. ಮಂಡಳಿಯ ಬೈಲಾ ನಲ್ಲಿ ಹೇಳಲಾದಂತೆ ಸಮುದಾಯದ ಸರ್ವತೋಮುಖ ಅಭಿವೃಧ್ಧಿ ಗಾಗಿ ಈ ಯೋಜನೆಯನ್ನು ಹಮ್ಮಿಕೊಳ್ಳುವಾಗ ಇದು ಮಂಡಳಿಯ Memorandum of Association ದನ್ವಯ ಇದೆಯೆಂದಾದರೆ ಅದೇ ಮಾನದಂಡವಾಗಬೇಕೇ ವಿನಃ ಇದುವರೆಗೆ ಬೇರೆಯವರು ಇಂತಹ ಯೋಜನೆ ಕೈಗೊಂಡಿದ್ದಾರೆಯೇ ಅನ್ನುವ ವಿಷಯ ಪ್ರಸ್ತುತವಾಗುವದಿಲ್ಲ ಎಂಬುದು ಮಂಡಳಿಯ ಸ್ಪಷ್ಟ ನಿಲುವಾಗಿದೆ. ಹಾಗೆಯೇ ಮಂಡಳಿಯು ಸಮುದಾಯದ ಅಭಿವೃದ್ಧಿಗಾಗಿ ರಚಿಸಲಾದ ಒಂದು ವಿಶೇಷ ಉದ್ದೇಶಿತ ವಾಹಕ(SPV) ವಾಗಿರುವುದರಿಂದ ಮಾನ್ಯ ಸರ್ಕಾರವು ಇಂತಹ ಉತ್ತಮ ಯೋಜನೆಗಳಿಗೆ ಅನುಮತಿ ನೀಡಬೇಕೆಂದು ಕೋರಲಾಗಿದೆ. ಈ ಸಾಲಿನಲ್ಲಿ 50 ಫಲಾನುಭವಿಗಳಿಗೆ ಇದನ್ನು ನೀಡಲು ತೀರ್ಮಾನಿಸಲಾಗಿದೆ.

**4. ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಹೆಸರಿನಲ್ಲಿರುವ ಜಾಗದಲ್ಲಿ ಇಂತಹ ಭವನಗಳನ್ನು ನಿರ್ಮಾಣ ಮಾಡಲು ಸಾಧ್ಯವೇ? ಮಂಡಳಿಯ ಅನುದಾನವನ್ನು ನೀಡಿದ್ದಲ್ಲಿ, ಮಂಡಳಿಯ ಹೆಸರಿನಲ್ಲೇ ಆಸ್ತಿ ಸೃಜನೆ ಆಗಬೇಕಾಗಿರುತ್ತದೆ. ಇಂತಹ ಖಾಸಗೀ ಸೊಸೈಟಿಗೆ ಕಟ್ಟಡ ನಿರ್ಮಾಣ ಮಾಡಲು ಅನುದಾನ ನೀಡಿದ್ದಲ್ಲಿ ಅಂತಹ ಕಟ್ಟಡಗಳನ್ನು ಮಂಡಳಿಯ ಹೆಸರಿನಲ್ಲಿ ನೋಂದಣಿ ಮಾಡಲು ಅವಕಾಶವಿರುವುದೇ?**

ಮಂಡಳಿಯು ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಶಾಸನಾತ್ಮಕವಾಗಿ ಕಂಪನಿ ಕಾಯ್ದೆ, ಕಲಂ 8 ರಡಿಯಲ್ಲಿ ರಚಿಸಲಾದ ಸರ್ಕಾರದ Not for profit ಕಂಪನಿಯಾಗಿದೆ. ಇದರ ಮೂಲ ಉದ್ದೇಶ ಸಮುದಾಯದ ಸೇವೆಯೇ ಹೊರತು ಆಸ್ತಿ ಸೃಜನೆ ಮಾಡಿ ಲಾಭ ಮಾಡುವ ಉದ್ದೇಶದಿಂದ ಈ ಮಂಡಳಿ ರಚಿಸಲಾಗಿಲ್ಲ. ಸರ್ಕಾರಕ್ಕೆ ಸಲ್ಲಿಸಲಾದ ಕ್ರಿಯಾ ಯೋಜನೆಯಲ್ಲಿ ವಿವರಿಸಿದಂತೆ, ಯಾವುದೇ ಫಲಾಪೇಕ್ಷೆ/ಲಾಭದ ಉದ್ದೇಶವಿಲ್ಲದೆ, ಸಮುದಾಯದ ಸೇವೆಯಲ್ಲಿರುವ ಅರ್ಹ ಸ್ವಯಂ ಸೇವಾ ಸಂಸ್ಥೆ/ಟ್ರಸ್ಟ್/ಸೊಸೈಟಿಗಳು ಈಗಾಗಲೇ ಹಲವಾರು ವರ್ಷಗಳಿಂದ ಸಮುದಾಯದ ಜನಪರ ಸೇವೆಯಲ್ಲಿ ತೊಡಗಿಕೊಂಡು ಅನುಭವ ಪಡೆದವುಗಳಾಗಿದ್ದು ಹಾಗೂ ಅವು ಇದುವರೆಗೂ ಸರ್ಕಾರದ ಯಾವುದೇ ಅನುದಾನವಿಲ್ಲದೇ ಹಲವಾರು ಸೇವಾಕಾರ್ಯಗಳನ್ನು ಕೈಗೊಂಡಿವೆ. ಇಂತಹ ಅರ್ಹ ಸ್ವಯಂ ಸೇವಾ

ಸಂಘ/ಸಂಸ್ಥೆ/ಟ್ರಸ್ಟ್ ಗಳಿಗೆ ಧನಸಹಾಯ ನೀಡಿ, ಸಮುದಾಯದ ಅರ್ಹ ಬಡವರಿಗೆ ಅಂತ್ಯಕ್ರಿಯೆ, ಅಪರಕರ್ಮ, ಮದುವೆ, ಮುಂಜಿ, ಧಾರ್ಮಿಕ ಕಾರ್ಯಕ್ರಮಗಳನ್ನು ಕಡಿಮೆ ವೆಚ್ಚದಲ್ಲಿ ಕೈಗೊಳ್ಳಲು ಸಹಾಯ ಮಾಡಲು ಈ ಯೋಜನೆಯನ್ನು ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ. ಮಂಡಳಿಯು ತನ್ನದೆ ಆದ ನಿವೇಶನ ಖರೀದಿಸಿ ಕಟ್ಟಡ ನಿರ್ಮಿಸಿ ಈ ಸೌಕರ್ಯಗಳನ್ನು ನೀಡಲು ಸರ್ಕಾರ ನೀಡುತ್ತಿರುವ ಸ್ವಲ್ಪ ಅನುದಾನದಲ್ಲಿ ಸಾಧ್ಯವಾಗುವುದಿಲ್ಲ. ಜೊತೆಗೆ ಈ ಕಟ್ಟಡ, ಸೌಕರ್ಯಗಳ ಉಸ್ತುವಾರಿ ನಿರ್ವಹಣೆ ಮಾಡುವ ಜವಾಬ್ದಾರಿಯು ಆಯಾ ಸಂಘ ಸಂಸ್ಥೆಗಳಿಗೆ ಇರುವುದರಿಂದ ಮಂಡಳಿಗೆ ಯಾವುದೇ ಪುನಾರಾವರ್ತಿ ಖರ್ಚು ವೆಚ್ಚಗಳಿರುವುದಿಲ್ಲ. ಮಂಡಳಿಯ ಕೇವಲ ಮೇಲ್ವಿಚಾರಣಾ ಜವಾಬ್ದಾರಿಯನ್ನು ಮಾತ್ರ ಹೊಂದಿರುತ್ತದೆ. ಮಂಡಳಿಯು ಸಮುದಾಯದ ಸರ್ವತೋಮುಖ ಅಭಿವೃದ್ಧಿ ಮಾಡುವ ವಿಶೇಷ ಉದ್ದೇಶಿತ ವಾಹಕವಾದ್ದರಿಂದ, ಸಮುದಾಯದ ಈ ಅರ್ಹ ಸಂಘ ಸಂಸ್ಥೆಗಳಿಗೆ ಹಣಕಾಸು ನೆರವು ನೀಡಿ ತನ್ಮೂಲಕ ಬಡ ಜನರಿಗೆ ಸೇವೆ ಸಲ್ಲಿಸುವ ಉದ್ದೇಶದಿಂದ ಮಂಡಳಿಯು ಸರ್ವಾನುಮತದಿಂದ ತೀರ್ಮಾನಮಾಡಿದೆ ಹಾಗೂ ಈ ತೀರ್ಮಾನ ಮಾಡಿ ಸರ್ಕಾರದ ಅನುಮತಿಯನ್ನು ಕೇಳುವುದು ಮಂಡಳಿಯ Memorandum of Association ನಲ್ಲಿರುವ ಪ್ಯಾರಾ 3(a & d)ನಂತೆ ಕಾನೂನಾತ್ಮಕವಿದೆಯೆಂದು ಮಂಡಳಿಯು ಭಾವಿಸುತ್ತದೆ.

3. The objects for which the Company is established are:

a. To aid, assist, promote, encourage, undertake, coordinate, organize, establish, develop, extend and render financial help and assistance by way of loan or otherwise to the financially and socially weaker and needy members of the Brahmin communities residing in the State of Karnataka: to secure their social betterment. Economic development and general up-liftment and to improve their means and standard of living to help and assist them in establishing and setting up business or businesses for the promotion of art, fine art, charity, crafts, religion, sports, literature, culture, science, education including, Vedic education, philosophy or diffusion of any knowledge for any public purpose and to help them in agriculture, industrial and tertiary sectors more particularly service sector

d. To provide education that builds the character of its future generations: promotes Bharatiya heritage: to conceptualize and establish Sanathana Dharma in accordance with the Vedas and Upanishads: to spread Vedic education among all the communities in the State of Karnataka and other states within India: to establish educational institutions and build temples for this purpose: to train and develop skilled personnel for such propagation: to construct facilities for conducting Vedic and spiritual discourses and religious seminars; and to provide Arts as a means to address humanity, promotion of Arts and Culture that helps multi-cultural understanding and conflict reduction, as it reaches out where ordinary communication fails.

ಆದ್ದರಿಂದ ಸಮುದಾಯದ ಸೇವೆಯನ್ನು ಸಲ್ಲಿಸುವಾಗ ಈಗಾಗಲೇ ಜನಪರ ಸೇವೆಯಲ್ಲಿ ತೊಡಗಿರುವ ಅರ್ಹ ಸಂಸ್ಥೆಗಳಿಗೆ ನೆರವು ನೀಡಿ ತನ್ಮೂಲಕ ಸಮುದಾಯದ ಬಡವರಿಗೆ ಸಹಾಯ ಮಾಡಲು ಕಂಪನಿ ಕಾಯ್ದೆಯಲ್ಲಿ ಯಾವ ನಿರ್ಬಂಧವೂ ಇರುವುದಿಲ್ಲ ಎಂದು ಮಂಡಳಿಯು ಭಾವಿಸುತ್ತದೆ. ಹಾಗಾಗಿ ಸರ್ಕಾರವು ಈ ಎಲ್ಲಾ ಯೋಜನೆಗಳಿಗೆ ಅನುಮತಿ ನೀಡಬೇಕೆಂದು ಕೋರಿ, ಸರ್ಕಾರಕ್ಕೆ ಯಥಾಪ್ರತಿ ಪತ್ರ ಬರೆಯುವುದು.

**9** **<u>ಸರ್ಕಾರಿ ಅಧಿಸೂಚನೆ: ಸಿಆಸುಇ 49 ಶಿಸನೇ 2021 ದಿನಾಂಕ: 19-03-2021 ರಲ್ಲಿ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಿಗೆ ರಾಜ್ಯ ಸಚಿವ ಸ್ಥಾನಮಾನವನ್ನು ನೀಡಿ ಆದೇಶಿಸಿರುವ ಹಿನ್ನಲೆಯಲ್ಲಿ, ಸದರಿ ದರ್ಜೆಗೆ ಉದ್ಭವಿಸಿದ ಮಂಜೂರಾದ ಹೆದ್ದೆಗಳ ಎದುರು ನೇಮಕಾತಿ ಮಾಡಿಕೊಳ್ಳುವ ಬಗ್ಗೆ.</u>**

ಮಂಡಳಿಯಲ್ಲಿ ಕಾರ್ಯನಿರ್ವಹಿಸಲು ಸಧ್ಯ ಮಂಡಳಿಗೆ ಹೊರಗುತ್ತಿಗೆ ಆಧಾರದಲ್ಲಿ ಒಂದು ಡೇಟಾ ಎಂಟ್ರಿ ಆಪರೇಟರ್ ಹುದ್ದೆ ಹಾಗೂ ಗ್ರೂಪ್ 'ಡಿ' ಒಂದು ಹುದ್ದೆ ಯನ್ನು ಮಂಜೂರು ಮಾಡಿ ಆದೇಶ ಹೊರಡಿಸಲಾಗಿರುತ್ತದೆ.

ಪ್ರಸ್ತುತ ಮಾನ್ಯ ಅಧ್ಯಕ್ಷರಿಗೆ ಸರ್ಕಾರಿ ಅಧಿಸೂಚನೆ: ಸಿಆಸುಇ 49 ಶಿಸನೇ 2021 ದಿನಾಂಕ: 19-03-2021 ರಲ್ಲಿ ರಾಜ್ಯ ಸಚಿವ ಸ್ಥಾನ ಮಾನ ದೊರೆತ ಹಿನ್ನಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 95 ಶಿಸನೇ 2020 ,ದಿನಾಂಕ: 07-10-2020 ರನ್ವಯ ಸದರಿಯವರಿಗೆ, 2 ಗ್ರೂಪ್ 'ಸಿ' ಹುದ್ದೆಗಳು, 2 ಗ್ರೂಪ್ 'ಡಿ' ಹುದ್ದೆಗಳು ಹಾಗೂ 1 ವಾಹನ ಚಾಲಕ ಹುದ್ದೆಯನ್ನು ಆಪ್ತ ಸಿಬ್ಬಂದಿಯಾಗಿ ಹೊಂದಬಹುದಾಗಿ ಎಂದು ಆದೇಶಿಸಿರುತ್ತದೆ. ಹೀಗೆ ಮಂಡಳಿಯಲ್ಲಿ ಕಾರ್ಯ ನಿರ್ವಹಿಸಲು ಒಟ್ಟು- 2 ಗ್ರೂಪ್ 'ಸಿ' ಹುದ್ದೆಗಳು, 1 ಡೇಟಾ

ಎಂಟ್ರಿ ಆಪರೇಟರ್, 3 ಗ್ರೂಪ್ 'ಡಿ' ಹುದ್ದೆಗಳು ಹಾಗೂ 1 ವಾಹನ ಚಾಲಕ ಹುದ್ದೆ ಉದ್ಭವಿಸಿದ್ದು, ಸದರಿ 2 ಗ್ರೂಪ್ 'ಸಿ' ಹಾಗೂ 1 ಡೇಟಾ ಎಂಟ್ರಿ ಆಪರೇಟರ್ ಹುದ್ದೆಗಳಿಗೆ ಮಾಹೆಯಾನ ನಿವ್ವಳ ವೇತನ (Carry home salary) ರೂ. 20,000/- ವನ್ನು ನಿಗದಿಪಡಿಸಿ ಹಾಗೂ 3 ಗ್ರೂಪ್ 'ಡಿ' ಹುದ್ದೆಗೆ ಹಾಗೂ 1 ವಾಹನ ಚಾಲಕ ರ ಹುದ್ದೆಗೆ as per labour Act, minimum wage ನ್ನು ನಿಗದಿಪಡಿಸಿ KEONICS ಸಂಸ್ಥೆಯ ಮೂಲಕ ದಿನಾಂಕ 01-04-2021 ರಿಂದ ಹೊರಗುತ್ತಿಗೆ ಪಡೆಯಲು ಸಭೆಯು ಅನುಮೋದಿಸಿ, KEONICS ಸಂಸ್ಥೆಗೆ ಹೊರಗುತ್ತಿಗೆ ಪಡೆಯುವ ಸಂಬಂಧ ಕ್ರಮ ಕೈಗೊಳ್ಳಲು ವ್ಯವಸ್ಥಾಪಕ ನಿರ್ದೇಶಕರಿಗೆ ಈ ಮೂಲಕ ಅಧಿಕಾರ ನೀಡಲಾಯಿತು.

10 **ಮಂಡಳಿಯ ದೈನಂದಿನ ಖರ್ಚು ವೆಚ್ಚಗಳನ್ನು ನಿರ್ವಹಿಸಲು Tally Software ಖರೀದಿಸಿದ್ದು ಸದರಿ Software ನಲ್ಲಿ ಕಾರ್ಯನಿರ್ವಹಿಸಲು ಕಛೇರಿಯ ಸಿಬ್ಬಂದಿಯವರಿಗೆ ಸಂಪೂರ್ಣ ಮಾಹಿತಿ ಇಲ್ಲದ ಕಾರಣ, ಪ್ರಸ್ತುತ ಆರ್ಥಿಕ ವರ್ಷದ ವರೆಗಿನ ಎಲ್ಲಾ ಹಣಕಾಸಿನ ವ್ಯವಹಾರಗಳನ್ನು Tally software ನಲ್ಲಿ ಪರಿಣಿತರಿಂದ ತಾತ್ಕಾಲಿಕವಾಗಿ ಅಳವಡಿಸಿಕೊಳ್ಳಲಾಗಿರುತ್ತದೆ. ಈ ಉದ್ದೇಶಕ್ಕಾಗಿ ಸದರಿ ಪರಿಣಿತರಿಗೆ ನೀಡಬಹುದಾದ ಮೊತ್ತವನ್ನು ಪಾವತಿ ಮಾಡಲು ಅನುಮೋದನೆಗಾಗಿ ಕೋರಿದೆ.**

ಮಂಡಳಿಯ ದೈನಂದಿನ ಖರ್ಚು ವೆಚ್ಚಗಳನ್ನು ನಿರ್ವಹಿಸಲು Tally Software ಖರೀದಿಸಿದ್ದು ಸದರಿ Software ನಲ್ಲಿ ಕಾರ್ಯನಿರ್ವಹಿಸಲು ಕಛೇರಿಯ ಸಿಬ್ಬಂದಿಯವರಿಗೆ ಸಂಪೂರ್ಣ ಮಾಹಿತಿ ಇಲ್ಲದ ಕಾರಣ, ಮಂಡಳಿಯು ಪ್ರಾರಂಭವಾದಾಗಿನಿಂದ ಪ್ರಸ್ತುತ 2020-21 ನೇ ಆರ್ಥಿಕ ವರ್ಷದ ವರೆಗಿನ ಎಲ್ಲಾ ಹಣಕಾಸಿನ ವ್ಯವಹಾರಗಳನ್ನು Tally software ನಲ್ಲಿ ತಾತ್ಕಾಲಿಕವಾಗಿ ಅಳವಡಿಸಿಕೊಳ್ಳುವ ಸಂಬಂಧ Tally software ಕುರಿತು ಮಾಹಿತಿ ಇರುವ ಶ್ರೀ. ಸೋಮಶೇಖರ ಭಟ್ ರವರಿಗೆ ಪ್ರತಿ ಭೇಟಿಗೆ ರೂ.2000/- ದಂತೆ ಒಟ್ಟು 5 ಭೇಟಿಗೆ ರೂ.10,000/- (ಹತ್ತು ಸಾವಿರ ರೂಪಾಯಿಗಳು ಮಾತ್ರ) ವನ್ನು ನೀಡಲು ಮಂಡಳಿಯ ಸಭೆಯು ಅನುಮೋದಿಸಿತು. ಮಂಡಳಿಯಲ್ಲಿ ಸದ್ಯಕ್ಕೆ ಲಭ್ಯವಿರುವ ಸಿಬ್ಬಂದಿಗಳಿಗೆ Tally software ಕುರಿತು ಮಾಹಿತಿ ಇಲ್ಲದಿರುವುದರಿಂದ ಇನ್ನು ಮುಂದೆಯೂ ಸಹ ಸದರಿ ಸೇವೆಯನ್ನು ಪ್ರತಿ ಭೇಟಿಗೆ ರೂ.2000/- ದಂತೆ ನಿಗದಿಪಡಿಸಿ ಪರಿಣಿತರಿಂದ ಮಂಡಳಿಯ Tally software ಕೆಲಸಗಳನ್ನು ಮಾಡಿಸಿಕೊಳ್ಳಲು ವ್ಯವಸ್ಥಾಪಕ ನಿರ್ದೇಶಕರಿಗೆ ತಿಳಿಸಲಾಯಿತು.

11 **ಸಾಂದೀಪನಿ ಶಿಷ್ಯವೇತನ ಯೋಜನೆಯಡಿ ಶಿಷ್ಯವೇತನಕ್ಕಾಗಿ ಅರ್ಜಿಗಳನ್ನು ದಿನಾಂಕ 19-02-2021 ರಿಂದ 20-04-2021 ರ ವರೆಗೆ ಆಹ್ವಾನಿಸಲಾಗಿದ್ದು, ಸದರಿ ದಿನಾಂಕವು ಮುಕ್ತಾಯವಾಗಿರುತ್ತದೆ. ಆದರೆ ಎಲ್ಲಾ ಕೋರ್ಸ್ ಗಳ ಪ್ರಥಮ ವರ್ಷದ ವಿದ್ಯಾರ್ಥಿಗಳ ದತ್ತಾಂಶಗಳನ್ನು ಇನ್ನೂ ಹಲವಾರು ವಿಶ್ವವಿದ್ಯಾಲಯಗಳು ರಾಜ್ಯ ಶಿಷ್ಯವೇತನ ತಂತ್ರಾಂಶರವರಿಗೆ ಈ ವರೆವಿಗೂ ನೀಡದೇ ಇರುವುದರಿಂದ ಸದರಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಅರ್ಜಿಗಳನ್ನು ಮುಂದುವರೆಸುವಂತೆ ರಾಜ್ಯ ಶಿಷ್ಯವೇತನ ತಂತ್ರಾಂಶ, ಇ-ಆಡಳಿತ ಇಲಾಖೆಯು ಕೋರಿದ್ದು, ಅದರಂತೆ ಈಗಾಗಲೇ ಖಾತೆಯನ್ನು ಸೃಜಿಸಿಕೊಂಡು ಅರ್ಜಿಯನ್ನು ಪೂರ್ಣಗೊಳಿಸಲು ಪ್ರಾರಂಭಿಸಿರುವ ವಿದ್ಯಾರ್ಥಿಗಳಿಗೆ ಅರ್ಜಿಸಲ್ಲಿಸಲು ಕೊನೆಯ ದಿನಾಂಕವನ್ನು ದಿನಾಂಕ 30-04-2021 ರ ವರೆಗೆ ಅಧ್ಯಕ್ಷರ ಅನುಮೋದನೆ ಮೇರೆಗೆ ಮುಂದುವರೆಸಲಾಗಿದ್ದು, ಈ ಬಗ್ಗೆ ಘಟನೋತ್ತರ ಮಂಜೂರಾತಿಗಾಗಿ ಸಲ್ಲಿಸಿದೆ.**

ಸಾಂದೀಪನಿ ಶಿಷ್ಯವೇತನ ಯೋಜನೆಯಡಿ ಶಿಷ್ಯವೇತನಕ್ಕಾಗಿ, ರಾಜ್ಯ ಶಿಷ್ಯವೇತನ ತಂತ್ರಾಂಶದಲ್ಲಿ ಈಗಾಗಲೇ ಖಾತೆಯನ್ನು ಸೃಜಿಸಿಕೊಂಡು ಅರ್ಜಿಯನ್ನು ಪೂರ್ಣಗೊಳಿಸಲು ಪ್ರಾರಂಭಿಸಿರುವ ವಿದ್ಯಾರ್ಥಿಗಳಿಗೆ ಅರ್ಜಿಸಲ್ಲಿಸಲು ಕೊನೆಯ ದಿನಾಂಕವನ್ನು ದಿನಾಂಕ 30-04-2021 ರ ವರೆಗೆ ಅಧ್ಯಕ್ಷರ ಅನುಮೋದನೆ ಮೇರೆಗೆ ಮುಂದುವರೆಸಿದ್ದನ್ನು ಹಾಗೂ ಸದರಿ ವಿಷಯದಲ್ಲಿ ಮಂಡಳಿಯ ಮಾನ್ಯ ಅಧ್ಯಕ್ಷರು ಕೈಗೊಂಡ ಎಲ್ಲಾ ನಿರ್ಧಾರವನ್ನು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಲಾಯಿತು..

12 **ಮಾನ್ಯ ಅಧ್ಯಕ್ಷರ ಅನುಮೋದನೆಯೊಂದಿಗೆ ಇತರೆ ಕಾರ್ಯಸೂಚಿಗಳು**
ಯಾವುದೂ ಇರುವುದಿಲ್ಲ.

13 **ವಂದನಾರ್ಪಣೆ**:
ಹಾಜರಿದ್ದ ಎಲ್ಲಾ ನಿರ್ದೇಶಕರಿಗೆ ವಂದನೆಗಳನ್ನು ಅರ್ಪಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಹೆಚ್ ಎಸ್ ಸಚ್ಚಿದಾನಂದ ಮೂರ್ತಿ)
ಅಧ್ಯಕ್ಷರು

**4 (1) (ಬಿ) – XI**

ಪ್ರಸ್ತುತ ಚಾಲನೆಯಲ್ಲಿರುವ ನಿಯಮಾವಳಿಗಳಲ್ಲಿ ಒದಗಿಸಲಾದ ಪರಿಹಾರದ ವ್ಯವಸ್ಥೆ ಸೇರಿದಂತೆ ಪ್ರತಿ ಅಧಿಕಾರಿಗಳು ಮತ್ತು ಉದ್ಯೋಗಿಗಳು ಸ್ವೀಕರಿಸಿದ ಮಾಸಿಕ ಸಂಭಾವನೆ

ಅಧಿಕಾರಿ/ ಸಿಬ್ಬಂದಿಗಳ ನಿರ್ದೇಶಿಕೆ

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧಿಕಾರಿ/ ಸಿಬ್ಬಂದಿಗಳ ದೂರವಾಣಿ ವಿವರ

| ಕ್ರ.ಸಂ | ಹೆಸರು ಮತ್ತು ಹುದ್ದೆ | ದೂರವಾಣಿ ಸಂಖ್ಯೆ |
|---|---|---|
| 1. | ಶ್ರೀ ಹೆಚ್. ಎಸ್ ಸಚ್ಚಿದಾನಂದ ಮೂರ್ತಿ<br>ಅಧ್ಯಕ್ಷರು ( ರಾಜ್ಯ ಸಚಿವ ಸಂಪುಟ ದರ್ಜೆ) | 080- 2960 5888 |
| 2. | ಶ್ರೀ ಮಂಜುನಾಥ ಹೆಗಡೆ ಕೆ.ಎಸ್.ಎ.ಎಸ್<br>ವ್ಯವಸ್ಥಾಪಕ ನಿರ್ದೇಶಕರು | 080- 2960 5888 |
| 3. | ಕಂಪನಿ ಸೆಕ್ರೆಟರಿ<br>(ಖಾಲಿ) | 080- 2960 5888 |
| 4. | ಮಾನ್ಯ ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು<br>(ಖಾಲಿ) | 080- 2960 5888 |
| 5. | ಶ್ರೀಮತಿ ಲಕ್ಷ್ಮೀ.ಆರ್<br>ಲೆಕ್ಕಾಧಿಕಾರಿಗಳು | 080- 2960 5888 |
| 6. | ಶ್ರೀ ಸುರೇಶ್ ಡಿ.ಎಸ್<br>ಪ್ರಥಮ ದರ್ಜೆ ಸಹಾಯಕರು (ನಿ) | 080- 2960 5888 |
| 7. | ಶ್ರೀ ಶ್ರೀಹರಿ.ಆರ್<br>ದ್ವಿತೀಯ ದರ್ಜೆ ಸಹಾಯಕರು (ನಿ) | 080- 2960 5888 |

## 4 (1) (ಬಿ) - X

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಪ್ರತಿಯೊಬ್ಬ ಅಧಿಕಾರಿ / ಸಿಬ್ಬಂದಿಗಳು ಪಡೆಯುವ ಮಾಸಿಕ ಒಟ್ಟು ವೇತನದ ವಿವರಗಳು

| **ಕ್ರ.ಸಂ** | **ಹೆಸರು ಮತ್ತು ಹುದ್ದೆ** | **ಒಟ್ಟು ಮೊತ್ತ** | **ಷರಾ** |
|---|---|---|---|
| 1. | ಶ್ರೀ ಮಂಜುನಾಥ ಹೆಗಡೆ<br>ಕೆ.ಎಸ್.ಎ.ಎಸ್<br>ವ್ಯವಸ್ಥಾಪಕ ನಿರ್ದೇಶಕರು | - | ಸದರಿ ಅಧಿಕಾರಿಗಳು ಅಧಿಕ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. |
| 2. | ಕಂಪನಿ ಸೆಕ್ರೆಟರಿ<br>(ಖಾಲಿ) | 5000.00 | ಗುತ್ತಿಗೆ ಮೇಲೆ ಸೇವೆಯನ್ನು ಪಡೆಯಲಾಗುತ್ತಿದೆ. |
| 3. | ಶ್ರೀಮತಿ ಲಕ್ಷ್ಮೀ.ಆರ್<br>ಲೆಕ್ಕಾಧಿಕಾರಿಗಳು | 66737.00 | |
| 4. | ಶ್ರೀ ಸುರೇಶ್ ಡಿ.ಎಸ್<br>ಪ್ರಥಮ ದರ್ಜೆ ಸಹಾಯಕರು (ನಿ) | - | ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು, ಮಂಡಳಿಯಿಂದ ಯಾವುದೇ ವೇತನ ಪಡೆಯುತ್ತಿರುವುದಿಲ್ಲ. |
| 5. | ಶ್ರೀ ಶ್ರೀಹರಿ.ಆರ್<br>ದ್ವಿತೀಯ ದರ್ಜೆ ಸಹಾಯಕರು (ನಿ) | - | ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು, ಮಂಡಳಿಯಿಂದ ಯಾವುದೇ ವೇತನ ಪಡೆಯುತ್ತಿರುವುದಿಲ್ಲ. |

## 4(1) (ಬಿ) -XI

**ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ;, ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯವನ್ನು,**

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ಆರ್ಥಿಕ ವರ್ಷ 2018-19 ರಿಂದ ಇಲ್ಲಿಯವರೆಗೆ ಸ್ವೀಕೃತವಾದ ಹಾಗೂ ಖರ್ಚುಮಾಡಲಾದ ಅನುದಾನದ ವಿವರ ಈ ಕೆಳಕಂಡಂತೆ.

| **ಲೆಕ್ಕ ಶೀರ್ಷಿಕೆ** | **2250-00-103-9-07 (103)** | | **4059-80-051-0-55 (132)** | |
|---|---|---|---|---|
| **ಆರ್ಥಿಕ ವರ್ಷ** | **ಮಂಜೂರಾದ ಸಹಾಯಾನುದಾನ** | **ಖರ್ಚು ಮಾಡಲಾದ ಮೊತ್ತ (ರೂಗಳಲ್ಲಿ)** | **ಮಂಜೂರಾದ ಬಂಡವಾಳ ವೆಚ್ಚ** | **ಖರ್ಚು ಮಾಡಲಾದ ಮೊತ್ತ (ರೂಗಳಲ್ಲಿ)** |
| 2018-19 | 5,00,00,000.00 | - | - | - |
| 2019-20 | 2,00,00,000.00 | 13,98,728.00 | 21,00,00,000.00 | 41,55,000.00 |
| 2020-21 | - | 99,34,188.00 | - | 94,43,865.00 |
| **ಒಟ್ಟು** | **7,00,00,000.00** | **1,13,32,916.00** | **21,00,00,000.00** | **1,35,98,865.00** |

## 4(1)(ಬಿ)- XII

ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನ ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳನ್ನು.

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ 2018-19 ನೇ ಸಾಲಿನಿಂದ ಇಲ್ಲಿಯವರೆಗೆ ರೂ. 21.00 ಕೋಟಿಗಳ ಅನುದಾನ ಬಿಡುಗಡೆ ಮಾಡಲಾಗಿದ್ದು, 2020-21ನೇ ಸಾಲಿನ ಕ್ರಿಯಾ ಯೋಜನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದೆ.

| ಕ್ರ. ಸಂ | ಯೋಜನೆಯ ಹೆಸರು | ನಿಗದಿ ಪಡಿಸಿದ ಅಂದಾಜು ಮೊತ್ತ | ಭೌತಿಕ ಗುರಿ | ಮೀಸಲಿರಿಸಿದ ಅನುದಾನ | ಈಗ ಮಂಜೂರಾತಿ ಕೋರಿದ ಯೋಜನೆಯ ಕುರಿತು ವಿವರ | ಈಗಾಗಲೇ ಮಂಜೂರಾದಲ್ಲಿ ಸರ್ಕಾರಿ ಆದೇಶ ಸಂಖ್ಯೆ |
|---|---|---|---|---|---|---|
| 1 | ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ | ಪ್ರಥಮ ಸ್ಥಾನ - ರೂ.15,000/-<br>ದ್ವಿತೀಯ ಸ್ಥಾನ – ರೂ.10,000/-<br>ತೃತೀಯ ಸ್ಥಾನ – ರೂ. 5,000/- | 150 ವಿದ್ಯಾರ್ಥಿಗಳಿಗೆ | 14.00 | - | ಕಂ.ಇ 84 ಮುಅಬಿ 2020 ದಿನಾಂಕ: 21-09-2020 |
| | | ಪ್ರತಿ ಸಮಾರೋಪ ಸಮಾರಂಭಗಳಿಗೆ ವೆಚ್ಚ ಹಾಗೂ ಪ್ರಮಾಣ ಪತ್ರ, ಬೆಳ್ಳಿ ಪದಕ, ನಿಘಂಟು, ಇತ್ಯಾದಿ | 34 ಜಿಲ್ಲೆಗಳಲ್ಲಿ | 6.00 | ಈಗಾಗಲೇ ಸರ್ಕಾರಿ ಆದೇಶ ಸಂಖ್ಯೆ ಕಂ.ಇ 84 ಮುಅಬಿ 2020 ರಲ್ಲಿ ಯೋಜನೆಯ ಅನುಷ್ಠಾನಕ್ಕೆ ಅನುಮತಿ ದೊರೆತಿದ್ದು ಸಮಾರಂಭ ವೆಚ್ಚಗಳಿಗೆ ಹಾಗೂ ಇತ್ಯಾದಿ ವೆಚ್ಚಗಳಿಗೆ ಈಗ ಅನುಮೋದನೆ ಕೋರಲಾಗಿದೆ. | - |
| 2 | ಚಾಣಕ್ಯ ಆಡಳಿತ ತರಬೇತಿ ಯೋಜನೆ | ಪ್ರತಿ ವಿದ್ಯಾರ್ಥಿಗೆ ರೂ. 55,000/- ರಂತೆ (ಜಿ.ಎಸ್.ಟಿ ಸೇರಿ) | 150 ವಿದ್ಯಾರ್ಥಿಗಳಿಗೆ | 82.50 | - | ಕಂ.ಇ 84 ಮುಅಬಿ 2020 ದಿನಾಂಕ: 21-09-2020 |
| 3 | ದೇವತಾರ್ಚನೆ ಶಿಬಿರ | ಪ್ರತಿ ಶಿಬಿರಾರ್ಥಿಗೆ ರೂ.500/- ರಂತೆ ಹಾಗೂ ಪ್ರತಿ ಅಧ್ಯಾಪಕರಿಗೆ ರೂ. 5000/- ರಂತೆ | 4000 ಶಿಬಿರಾರ್ಥಿಗಳಿಗೆ<br><br>175 ಅಧ್ಯಾಪಕರಿಗೆ | 20.00<br><br>8.75 | - | ಕಂ.ಇ 97 ಮುಅಬಿ 2020 ದಿನಾಂಕ: 10-11-2020 |
| | | ಪ್ರತಿ ಸಮಾರೋಪ ಸಮಾರಂಭಗಳಿಗೆ ವೆಚ್ಚ ಹಾಗೂ ಮಂತ್ರ ಪುಸ್ತಕ, ಪ್ರಮಾಣ ಪತ್ರ, ಇತ್ಯಾದಿ | ಎಲ್ಲಾ ಜಿಲ್ಲೆಗಳಲ್ಲಿ | 10.00 | ಈಗಾಗಲೇ ಸರ್ಕಾರಿ ಆದೇಶ ಸಂಖ್ಯೆ ಕಂ.ಇ 97 ಮುಅಬಿ 2020 ದಿನಾಂಕ: 10-11-2020 ರಲ್ಲಿ ಯೋಜನೆಯ ಅನುಷ್ಠಾನಕ್ಕೆ ಅನುಮತಿ ದೊರೆತಿದ್ದು ಸಮಾರಂಭ ವೆಚ್ಚಗಳಿಗೆ ಹಾಗೂ ಇತ್ಯಾದಿ ವೆಚ್ಚಗಳಿಗೆ ಈಗ ಅನುಮೋದನೆ ಕೋರಲಾಗಿದೆ. | - |
| 4 | ಸಾಂದೀಪನಿ ಶಿಷ್ಯ ವೇತನ **(ಎ)** ಸರ್ಕಾರದಿಂದ ಒಪ್ಪಿತ ನಿರ್ದೇಶನದಂತೆ | ಸರ್ಕಾರದ ಆದೇಶ ಸಂಖ್ಯೆ: ಕಂ.ಇ 99 ಮುಅಬಿ 2020 ದಿನಾಂಕ: 20-11-2020 ರಂತೆ ಹಾಗೂ ಗ್ರೂಪ್ ಎ,ಬಿ,ಸಿ,ಡಿ ಯ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ನಿಗದಿಪಡಿಸಲಾದ ಎಲ್ಲಾ Non refundable ಶುಲ್ಕ ಮರುಪಾವತಿ ಮಾಡಲಾಗುವುದು ಹಾಗೂ ಎಲ್ಲಾ ಗ್ರೂಪ್ ನ ಅಂಧ/ ವಿಕಲಚೇತನರಿಗೆ ರೂ.1600 ಗಳು ಹೆಚ್ಚುವರಿಯಾಗಿ ಪಾವತಿಸಲಾಗುವುದು ಮತ್ತು ವಾರ್ಷಿಕ ನಿರ್ವಹಣಾ ವೆಚ್ಚ ರೂ.15,000 ಗಳನ್ನು ( ಗರಿಷ್ಠ 10 ತಿಂಗಳಿಗೆ, ಮಾಹೆಯಾನ ರೂ.1,500 ರಂತೆ ) ಪಾವತಿಸಲಾಗುವುದು. | 800 ವಿದ್ಯಾರ್ಥಿಗಳಿಗೆ<br>430 ವಿದ್ಯಾರ್ಥಿಗಳಿಗೆ<br>2000 ವಿದ್ಯಾರ್ಥಿಗಳಿಗೆ<br>2500 ವಿದ್ಯಾರ್ಥಿಗಳಿಗೆ | 400.00<br>150.00<br>200.00<br>450.00 | - | ಕಂ.ಇ 99 ಮುಅಬಿ 2020 ದಿನಾಂಕ: 20-11-2020 |

| | | | | | | |
|---|---|---|---|---|---|---|
| | ಸಾಂದೀಪನಿ ಶಿಷ್ಯವೇತನ **(ಬಿ)** ಅಧ್ಯಕ್ಷರ ವಿವೇಚನಾ ಕೋಟಾದಡಿ (ಮಂಡಳಿಯಲ್ಲಿ ನಿರ್ಧರಿಸಿದಂತೆ) | ಸರ್ಕಾರದ ಆದೇಶ ಸಂಖ್ಯೆ: ಕಂ.ಇ 99 ಮುಅಬಿ 2020 ದಿನಾಂಕ: 20-11-2020 ರಂತೆ ಹಾಗೂ ಗ್ರೂಪ್ ಎ,ಬಿ,ಸಿ,ಡಿ ಯ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ನಿಗದಿಪಡಿಸಲಾದ ಎಲ್ಲಾ Non refundable ಶುಲ್ಕ ಮರುಪಾವತಿ ಮಾಡಲಾಗುವುದು ಹಾಗೂ ಎಲ್ಲಾ ಗ್ರೂಪ್ ನ ಅಂಧ/ ವಿಕಲಚೇತನರಿಗೆ ರೂ.1600 ಗಳು ಹೆಚ್ಚುವರಿಯಾಗಿ ಪಾವತಿಸಲಾಗುವುದು ಮತ್ತು ವಾರ್ಷಿಕ ನಿರ್ವಹಣಾ ವೆಚ್ಚ ರೂ.15,000 ಗಳನ್ನು ( ಗರಿಷ್ಠ 10 ತಿಂಗಳಿಗೆ, ಮಾಹೆಯಾನ ರೂ.1,500 ರಂತೆ ) ಪಾವತಿಸಲಾಗುವುದು. | 286 ವಿದ್ಯಾರ್ಥಿಗಳು | 60.00 | ಈಗ ಅನುಮೋದನೆ ಕೋರಲಾಗಿದೆ | - |
| 5 | ಕಲ್ಯಾಣ ಯೋಜನೆಯಡಿ "ಅರುಂಧತಿ" | ಪ್ರತಿ ವಧುವಿಗೆ ರೂ. 25,000/- ರಂತೆ | 247 ಜೋಡಿಗೆ | 61.75 | ಈಗ ಅನುಮೋದನೆ ಕೋರಲಾಗಿದೆ. | - |
| 6 | ಕಲ್ಯಾಣ ಯೋಜನೆಯಡಿ "ಮೈತ್ರೇಯಿ" | ಪ್ರತಿ ಬ್ರಾಹ್ಮಣ ವಧುವಿಗೆ ರೂ.3.00 ಲಕ್ಷದ ಬಾಂಡ್ ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಬಿ.ಡಿ.ಬಿ ಹಾಗೂ ಫಲಾನುಭವಿಯ ಜಂಟಿ ಹೆಸರಿನಲ್ಲಿ ಬ್ಯಾಂಕ್ FDR | 50 ವಧುವಿಗೆ | 150.00 | ಈಗ ಅನುಮೋದನೆ ಕೋರಲಾಗಿದೆ. | - |
| 7 | **(ಎ)** ಪುರುಷೋತ್ತಮ ಸ್ವಯಂ ಉದ್ಯೋಗ ಯೋಜನೆಯಡಿ "ಲಘು ಸಹಾಯಧನ" | ಸಾಲದ ಮೊತ್ತದ ಶೇ.30 ಅಥವಾ ಗರಿಷ್ಠ ರೂ. 50,000/- ಸಹಾಯಧನ (ಗರಿಷ್ಠ ಸಾಲ ರೂ.2.00 ಲಕ್ಷಗಳು – ಬ್ಯಾಂಕ್ ಸಾಲ) | 80 | 40.00 | ಈಗ ಅನುಮೋದನೆ ಕೋರಲಾಗಿದೆ. | - |
| | **(ಬಿ)** ಪುರುಷೋತ್ತಮ ಸ್ವಯಂ ಉದ್ಯೋಗ ಯೋಜನೆಯಡಿ "ಮಧ್ಯಮ ಸಹಾಯಧನ" | ಸಾಲದ ಮೊತ್ತದ ಶೇ.20 ಅಥವಾ ಗರಿಷ್ಠ ರೂ. 1,30,000/- ಸಹಾಯಧನ (ಗರಿಷ್ಠ ಸಾಲ ರೂ.7.00 ಲಕ್ಷಗಳು – ಬ್ಯಾಂಕ್ ಸಾಲ) | 50 | 65.00 | ಈಗ ಅನುಮೋದನೆ ಕೋರಲಾಗಿದೆ. | - |
| 8 | **(ಎ)** ಸರ್ ಎಂ ವಿಶ್ವೇಶ್ವರಯ್ಯ ಕೌಶಲ್ಯಾಭಿವೃದ್ಧಿ ಯೋಜನೆಯಡಿ IITJEE ಕೋರ್ಸ್ ಗಳಿಗೆ ತರಬೇತಿ | ತಲಾ ವಿದ್ಯಾರ್ಥಿಗೆ ರೂ.11,800/- ರಂತೆ (ಜಿ.ಎಸ್.ಟಿ ಸೇರಿ) | 339 | 40.00 | ಈಗ ಅನುಮೋದನೆ ಕೋರಲಾಗಿದೆ. | - |
| | **(ಬಿ)** ಸರ್ ಎಂ ವಿಶ್ವೇಶ್ವರಯ್ಯ ಕೌಶಲ್ಯಾಭಿವೃದ್ಧಿ ಯೋಜನೆಯಡಿ NEET ಕೋರ್ಸ್ ಗಳಿಗೆ ತರಬೇತಿ | ತಲಾ ವಿದ್ಯಾರ್ಥಿಗೆ ರೂ.11,800/- ರಂತೆ (ಜಿ.ಎಸ್.ಟಿ ಸೇರಿ) | 339 | 40.00 | | |
| | **(ಸಿ)** ಸರ್ ಎಂ ವಿಶ್ವೇಶ್ವರಯ್ಯ ಕೌಶಲ್ಯಾಭಿವೃದ್ಧಿ ಯೋಜನೆಯಡಿ ಬ್ಯಾಂಕಿಂಗ್ ಹುದ್ದೆಗಳಿಗೆ ತರಬೇತಿ | ತಲಾ ವಿದ್ಯಾರ್ಥಿಗೆ ರೂ.20,000/- ರಂತೆ (ಜಿ.ಎಸ್.ಟಿ ಸೇರಿ) | 500 | 100.00 | ಈಗ ಅನುಮೋದನೆ ಕೋರಲಾಗಿದೆ. | - |
| 9 | ಸಾಂದೀಪನಿ ಶಿಷ್ಯವೇತನ ಯೋಜನೆಯಡಿ ಉನ್ನತ ಶಿಕ್ಷಣ (ವಿದೇಶದಲ್ಲಿ) ಸಹಾಯಧನ | ಸಾಲದ ಮೊತ್ತದ ಶೇ.10 ಗರಿಷ್ಠ ರೂ. 1,00,000/- ಸಹಾಯಧನ – 2 ಕಂತುಗಳಲ್ಲಿ ( ಗರಿಷ್ಠ ರೂ. 50,000/- ರಂತೆ) (ಗರಿಷ್ಠ ಸಾಲದ ಮಿತಿ ಬ್ಯಾಂಕ್ ನಿರ್ಧಾರದಂತೆ) | 50 | 25.00 | ಈಗ ಅನುಮೋದನೆ ಕೋರಲಾಗಿದೆ. | - |
| 10 | ಸಾಂದೀಪನಿ ಶಿಷ್ಯವೇತನ ಯೋಜನೆಯಡಿ ಉನ್ನತ ಶಿಕ್ಷಣ (ಸ್ವದೇಶದಲ್ಲಿ) ಸಹಾಯಧನ | ಸಾಲದ ಮೊತ್ತದ ಶೇ.25 ಗರಿಷ್ಠ ರೂ. 1,00,000/- ಸಹಾಯಧನ- 4 ಕಂತುಗಳಲ್ಲಿ (ಗರಿಷ್ಠ ರೂ.25,000/- ರಂತೆ) (ಗರಿಷ್ಠ ಸಾಲ ರೂ.4.00 ಲಕ್ಷಗಳು – ಬ್ಯಾಂಕ್ ಸಾಲ) | 200 | 50.00 | ಈಗ ಅನುಮೋದನೆ ಕೋರಲಾಗಿದೆ. | - |

| | | | | | | |
|---|---|---|---|---|---|---|
| 11 | ಚೈತನ್ಯ ಉತ್ಸವ ಯೋಜನೆಯಡಿ ಕ್ರೀಡಾಪಟುಗಳಿಗೆ ಸಹಾಯಧನ | ಮಂಡಳಿಯ ಪ್ರತಿ ತ್ರೈ ಮಾಸಿಕ ಸಭೆಯಲ್ಲಿ ನಿರ್ಧರಿಸಿದಂತೆ (ಸರಾಸರಿ ಒಬ್ಬರಿಗೆ ರೂ.47,000/- ರಂತೆ) | 15 | 7.00 | ಈಗ ಅನುಮೋದನೆ ಕೋರಲಾಗಿದೆ. | - |
| 12 | ಇತರೆ ಸಾಮಾಜಿಕ ಯೋಜನೆಗಳು (ಅಪರಕರ್ಮ ವ್ಯವಸ್ಥೆ/ ಸಮುದಾಯ ಭವನ/ ಗಾಯತ್ರಿ ಭವನ/ ಅನಾಥಾಲಯ/ ವೃದ್ಧಾಶ್ರಮ ನಿರ್ಮಾಣ/ ದುರಸ್ಥಿ ಹಾಗೂ ಅಂಗವಿಕಲರು/ ಬುದ್ಧಿಮಾಂದ್ಯರು/ ಅಂಧರು ಇವರುಗಳಿಗೆ ಸಹಾಯ ಧನ, ಇತ್ಯಾದಿ ಸಾಮಾಜಿಕ ಕಳಕಳಿಯ ಸಹಾಯಗಳು) | ಪ್ರತೀ ಯೋಜನೆಗಳಿಗೆ ಅಗತ್ಯತೆಗನುಗುಣವಾಗಿ ಮಂಡಳಿಯಿಂದ ಸಹಾಯಧನವನ್ನು ನಿಗದಿಪಡಿಸಲಾಗುವುದು. | ಸ್ವೀಕೃತ ಅರ್ಜಿಗಳಿಗೆ ಅನುಗುಣವಾಗಿ ಮಂಡಳಿಯು ತೀರ್ಮಾನ ಕೈಗೊಳ್ಳುವುದು. | 75.00 | ಈಗ ಅನುಮೋದನೆ ಕೋರಲಾಗಿದೆ. | - |
| 13 | ಯೋಜನೆಗಳ ಅನುಷ್ಠಾನಕ್ಕೆ ಆನ್-ಲೈನ್ ಅರ್ಜಿ ನಮೂನೆ ಅಭಿವೃದ್ದಿ ಹಾಗೂ ಯೋಜನೆಗಳಿಗೆ ಸಂಬಂಧಿಸಿದಂತೆ ಆಗಬಹುದಾದ ಖರ್ಚು | ಅಗತ್ಯತೆಗೆ ಅನುಗುಣವಾಗಿ | - | 45.00 | ಈಗ ಅನುಮೋದನೆ ಕೋರಲಾಗಿದೆ. | - |
| | | | **ರೂ. 21,00,00,000.00** | | | |

## 4(1)(ಬಿ) -XIII

### ಅದು ನೀಡಿರುವ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರಪತ್ರಗಳನ್ನು ಪಡೆಯುವವರ ವಿವರಗಳು.

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಿಂದ ಯಾವುದೇ ರಿಯಾಯಿತಿ ಯೋಜನೆಗಳು ಜಾರಿಯಲ್ಲಿ ಇಲ್ಲ.

## 4 (1) (ಬಿ)- XIV

**ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ವತಿಯಿಂದ ಯಾವುದೇ ಅನುದಾನವನ್ನು ಯಾವುದೇ ಯೋಜನೆಗಳಿಗೆ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವುದಿಲ್ಲ.**

## 4 (1) (ಬಿ)- XV

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಯಾವುದೇ ಗ್ರಂಥಾಲಯವನ್ನು ಅಥವಾ ವಚನಾಲಯವನ್ನು ನಿರ್ವಹಿಸುತ್ತಿಲ್ಲ.

## 4(1) (ಬಿ) -XVI

**ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಕಛೇರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಧಿಕಾರಿಗಳನ್ನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರಿಯನ್ನಾಗಿ ಪದನಾಮಿಕರಿಸಲಾಗಿದೆ.**

| ಅಧಿಕಾರಿ | ಹೆಸರು | ಪದನಾಮ | ವಿಳಾಸ |
|---|---|---|---|
| ಮೇಲ್ಮನವಿ ಪ್ರಾಧಿಕಾರಿ | ಮಂಜುನಾಥ. ಹೆಗಡೆ, ಕೆ.ಎಸ್.ಎ.ಎಸ್ | ವ್ಯವಸ್ಥಾಪಕ ನಿರ್ದೇಶಕರು | #14/3, 3ನೇ ಮಹಡಿ, ಶ್ರೀ ಅರವಿಂದ ಭವನ, ದಿ ಮಿಥಿಕ್ ಸೊಸೈಟಿ ಆವರಣ, ನೃಪತುಂಗ ರಸ್ತೆ, ಬೆಂಗಳೂರು-560001<br>email id: md.ksbdb@ka.gov.in<br>Phone no: 080-29605888 |
| ಸಾರ್ವಜನಿಕ ಮಾಹಿತಿ ಅಧಿಕಾರಿ | ಲಕ್ಷ್ಮೀ.ಆರ್ | ಲೆಕ್ಕಾಧಿಕಾರಿಗಳು | #14/3, 3ನೇ ಮಹಡಿ, ಶ್ರೀ ಅರವಿಂದ ಭವನ, ದಿ ಮಿಥಿಕ್ ಸೊಸೈಟಿ ಆವರಣ, ನೃಪತುಂಗ ರಸ್ತೆ, ಬೆಂಗಳೂರು-560001<br>email id: contact.ksbdb@karnataka.gov.in<br>Phone no: 080-29605888 |
| ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ/ ವಿಷಯ ನಿರ್ವಾಹಕರು | ಶ್ರೀ ಡಿ.ಎಸ್ ಸುರೇಶ್ | ಪ್ರ.ದ.ಸ | #14/3, 3ನೇ ಮಹಡಿ, ಶ್ರೀ ಅರವಿಂದ ಭವನ, ದಿ ಮಿಥಿಕ್ ಸೊಸೈಟಿ ಆವರಣ, ನೃಪತುಂಗ ರಸ್ತೆ, ಬೆಂಗಳೂರು-560001<br>email id: contact.ksbdb@karnataka.gov.in<br>Phone no: 080-29605888 |

## 4 (1) (ಬಿ) -XVI (C)

ಕರ್ನಾಟಕ ಮಾಹಿತಿ ಹಕ್ಕು ಕಾಯ್ದೆ 2005 ರ ಕಲಂ 4 (1) (ಎ) ಮತ್ತು 4 (1) (ಬಿ) ರಂತೆ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ಸಂಬಂಧಿಸಿದ ಮಾಹಿತಿಯನ್ನು ಕಛೇರಿ ಸೂಚನಾ ಫಲಕದಲ್ಲಿ ಮತ್ತು ಮಂಡಳಿಯ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.